ಸಂಪುಟ : 10 ಸಂಚಿಕೆ: 56 ಪುಟ : 4+2 ಬೆಲೆ: 3.00 ರವಿವಾರ ಮಾರ್ಚ್ 30 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 56 Pages : 4+2 Price : 3.00 Sunday March 30 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




### ನೆತ್ತಿ ಸುಡುವ ಬಿಸಿಲು, ಜೇಬು ಸುಡುವ ಬೆಲೆ ಏರಿಕೆಯ ನಡುವೆಯೂ ಯುಗಾದಿ-ರಂಜಾನ್ ಹಬ್ಬದ ಖರೀದಿ ಅಬ್ಬರ

# ಮಾರುಕಟ್ಟೆಯಲ್ಲಿ ಜನ ಸಾಗರ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಹಿಂದೂಗಳ ಹೊಸ ವರ್ಷದ ಯುಗಾದಿ ಹಬ್ಬ ಹಾಗೂ ಮುಸ್ಲಿಮರ ದೊಡ್ಡ ಹಬ್ಬ ರಂಜಾನ್ ಜೊತೆಗೆ ಹನುಮ ಜಯಂತಿ, ಅನೇಕ ಕಡೆ ಜಾತ್ರೆ, ಮದುವೆಗಳೂ ಏಕ ಕಾಲಕ್ಕೆ ಬಂದಿರುವುದರಿಂದ ಕಳೆದ 3-4 ದಿನಗಳಿಂದ ಪಟ್ಟಣದಲ್ಲಿ ಖರೀದಿ ಭರಾಟೆ ಜೋರಾಗಿಯೇ ಸಾಗಿದೆ. ಶನಿವಾರ ಯುಗಾದಿ ಅಮವಾಸ್ಯೆ, ಭಾನುವಾರ ಯುಗಾದಿ ಪಾಡ್ಯ ಮತ್ತು ರಂಜಾನ್ ಹಬ್ಬದ ಸಡಗರ ಎಲ್ಲೆಡೆ ಮನೆ ಮಾಡಿದೆ.

ನೆತ್ತಿ ಸುಡುವ ಬಿಸಿಲು, ಜೇಬು ಸುಡುವಂತಿರುವ ಅಗತ್ಯ ವಸ್ತುಗಳ ಬೆಲೆ ಏರಿಕೆಯ ನಡುವೆಯೂ ಯುಗಾದಿ-ರಂಜಾನ್ ಹಬ್ಬದ ಖರೀದಿ ಅಬ್ಬರಕ್ಕೇನೂ ಕಡಿಮೆ ಇಲ್ಲವೆಂಬಂತಹ ವಾತಾವರಣ ಕಂಡು ಬರುತ್ತಿದೆ. ಹಿಂದೂ ಮತ್ತು ಮುಸ್ಲಿಂ ಬಾಂಧವರು ಅಗತ್ಯ ಸಾಮಗ್ರಿ ಖರೀದಿಯಲ್ಲಿ ತೊಡಗಿದ್ದಾರೆ. ಬಹುತೇಕ ಪರೀಕ್ಷೆಗಳು ಮುಗಿದಿದ್ದು, ಪಾಲಕರೊಂದಿಗೆ ಮಕ್ಕಳೂ ಮಾರುಕಟ್ಟೆಗೆ ಬಂದಿದ್ದರಿಂದ ಅಗತ್ಯ ವಸ್ತುಗಳ ಖರೀದಿ ಜತೆಗೆ ಹೋಟೆಲ್, ತಂಪು ಪಾನೀಯಗಳ ಅಂಗಡಿಗಳು ಭರ್ತಿಯಾಗಿವೆ.

ಹಬ್ಬಕ್ಕೆ ಹೊಸ ವಸ್ತ್ರಾಭರಣ, ವಾಹನ, ದಿನಸಿ, ಹೂವು-ಹಣ್ಣು, ತರಕಾರಿ ಸೇರಿ ಅವರವರ ಆರ್ಥಿಕ ಶಕ್ತಿ ಸಾಮರ್ಥ್ಯ ಮತ್ತು ಅಗತ್ಯತೆಗನುಗುಣವಾದ ವಸ್ತುಗಳ ಖರೀದಿಗಾಗಿ ಪಟ್ಟಣಕ್ಕೆ ಜನ ಹರಿದು ಬರುತ್ತಿದ್ದು, ಜನ ಸಂದಣಿಯಿಂದ ಮಾರುಕಟ್ಟೆ ಪ್ರದೇಶ ಕಿಕ್ಕಿರಿದು ತುಂಬಿತ್ತು. ಮುಖ್ಯ ಬಜಾರ ರಸ್ತೆಯ ಎರಡೂ ಕಡೆ ಬೀದಿ-ಬದಿ ವ್ಯಾಪಾರಸ್ಥರ ತಳ್ಳುವ ಗಾಡಿಗಳು, ಬೈಕ್, ಅಟೋ, ಗೂಡ್ಸ್ ವಾಹನಗಳಿಂದ ಟ್ರಾಫಿಕ್ ಕಿರಿಕಿರಿಯಿಂದ ಜನತೆ ಪರದಾಡುವಂತಾಗಿತ್ತು. ವಿಶೇಷವಾಗಿ ಮುಸ್ಲಿಂ ಸಮುದಾಯದವರು ರಂಜಾನ್ ತಿಂಗಳು ಪೂರ್ತಿ ಪ್ರಾರ್ಥನೆ ಹಾಗೂ ಉಪವಾಸದ ನಂತರ ಹಬ್ಬದ ಸಂಭ್ರಮದಲ್ಲಿ ಭಾಗಿಯಾಗುತ್ತಾರೆ. ರಂಜಾನ್ ಹಬ್ಬದ ವಿಶೇಷ ಊಟಕ್ಕೆ ಬೇಕಾಗುವ ಸುರಕುಂಬಾ ಇತರೆ ಸಿಹಿ ಪದಾರ್ಥಕ್ಕೆ ಬೇಕಾದ ಶಾವಿಗೆ, ಒಣ ಹಣ್ಣುಗಳು ಮಾರಾಟಕ್ಕೆ ಬಂದಿವೆ. ಶಾವಿಗೆ, ಬೆಲ್ಲ, ಸಕ್ಕರೆ, ದ್ರಾಕ್ಷಿ, ಗೋಡಂಬಿ, ಸಕ್ಕರೆ, ಬಾಸುಮತಿ ಅಕ್ಕಿ ಸೇರಿದಂತೆ ಮಸಾಲೆ ಪದಾರ್ಥ ಸೇರಿ ಹಬ್ಬಕ್ಕೆ ಬೇಕಾದ ವಿವಿಧ ವಸ್ತುಗಳ ಖರೀದಿ ಜೋರಾಗಿದೆ.



> ಪರೀಕ್ಷೆಗಳು ಮುಗಿದಿದ್ದರಿಂದ ಹಬ್ಬದ ವ್ಯಾಪಾರಕ್ಕೆ ಪಾಲಕರು ಮಕ್ಕಳನ್ನೂ ಕರೆತರುತ್ತಿದ್ದಾರೆ. ಬಿಸಿಲ ಪ್ರಮಾಣ ಹೆಚ್ಚಿರುವುದರಿಂದ ಬಾಯಾರಿಕೆ-ದಾಹ ತಣಿಸಿಕೊಳ್ಳಲು ಚಹಾ-ಟಿಫನ್ ವ್ಯಾಪಾರಕ್ಕಿಂತ ಕೋಲ್ಡ್ ವಾಟರ್, ಕೋಲ್ಡ್‌ಡ್ರಿಂಕ್ಸ್, ಐಸ್‌ಕ್ರೀಮ್ ವ್ಯಾಪಾರ ಜೋರಾಗಿದೆ. ದೊಡ್ಡ ಅಂಗಡಿಗಳಿಗಿಂತಲೂ ರಸ್ತೆ ಬದಿಯ ಸಣ್ಣ ವ್ಯಾಪಾರಾವೇ ಜೋರಾಗಿದೆ.
>
> **– ಮಂಜು ಶಾಲೋಡ. ವ್ಯಾಪಾರಸ್ಥರು.**

ದೊಡ್ಡ ಅಂಗಡಿಗಳ ಹೊರತಾಗಿ ಬೀದಿ ಬದಿಯಲ್ಲಿನ ತಳ್ಳು ಗಾಡಿಗಳಲ್ಲಿ ಬಟ್ಟೆ, ಬಳೆ, ಚಪ್ಪಲಿ, ಸೀರೆ, ಕುರ್ತಾ, ಸುಗಂಧ ದ್ರವ್ಯಗಳು, ಮಹಿಳೆಯರ ಶೃಂಗಾರದ ವಸ್ತುಗಳು, ತಾಜ್ (ಟೊಪ್ಪಿಗೆ), ಮಕ್ಕಳ ಬಟ್ಟೆಗಳು ಹೀಗೆ ಹಬ್ಬಕ್ಕೆ ಬೇಕಿರುವ ಎಲ್ಲ ಅಗತ್ಯ ವಸ್ತುಗಳ ಖರೀದಿ ಜೋರಾಗಿತ್ತು. ಮುಖ್ಯವಾಗಿ ಯುಗಾದಿ ಪಾಡ್ಯ ರೈತರ ಪಾಲಿನ ಹೊಸ ವರ್ಷವೇ ಸರಿ. ಹೊಸ ಹುಮ್ಮಸ್ಸಿನೊಂದಿಗೆ ಭೂತಾಯಿಗೆ ಪೂಜೆ ಸಲ್ಲಿಸಿ ಮಾಗಿ ಉಳುಮೆ ಪ್ರಾರಂಭಿಸುವ ರೈತರು ಎತ್ತುಗಳು, ಹೊಸ ಟ್ರ್ಯಾಕ್ಟರ್, ಕೃಷಿ ಸಾಮಗ್ರಿಗಳನ್ನು ಖರೀದಿಸುವ ಸಡಗರದಲ್ಲಿದ್ದಾರೆ.

## ಉಪನ್ಯಾಸ ಕಾರ್ಯಕ್ರಮ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ



ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಮಾರ್ಚ್ 30ರಂದು ಬೆಳಿಗ್ಗೆ 7.30ಕ್ಕೆ ನಡೆಯಲಿರುವ ಬಸವದಳದ 1639ನೇ ಶರಣ ಸಂಗಮದಲ್ಲಿ ಸಹಜ ಶಿವಯೋಗ ಹಾಗೂ ಅನುಭವ ಮಂಟಪದ ಪ್ರಥಮಾಧ್ಯಕ್ಷರಾದ ಅಲ್ಲಮ ಪ್ರಭುಗಳ ಜಯಂತಿ ನಿಮಿತ್ತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ಬಸವದಳದ ಅಧ್ಯಕ್ಷ, ಶರಣ ವಿ.ಕೆ. ಕರೇಗೌಡ್ರ ವಹಿಸುವರು. ಶರಣತತ್ವ ಚಿಂತಕ, ಶರಣ ಎಸ್.ಎ. ಮುಗದ ಸಹಜ ಶಿವಯೋಗ ಹಾಗೂ ಶರಣ ಎನ್.ಎಚ್. ಹಿರೇಸಕ್ಕರಗೌಡ್ರ ಉಪನ್ಯಾಸ ನೀಡುವರು. ಶರಣ ಸಿದ್ಧಲಿಂಗಪ್ಪ ಹಂಚಿನಾಳ ಅತಿಥಿಗಳಾಗಿ ಆಗಮಿಸುವರು. ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

## ದಾಸಿಮಯ್ಯನವರ ಜಯಂತಿ ನಿಮಿತ್ತ ಸ್ಪರ್ಧೆ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ



ಗದಗ ಜಿಲ್ಲಾ ದೇವಾಂಗ ಸಂಘ ಮತ್ತು ದೇವರ ದಾಸಿಮಯ್ಯ ಪ್ರತಿಷ್ಠಾಪನ ಸಮಿತಿ ವತಿಯಿಂದ ಎಪ್ರಿಲ್ 2ರಂದು ನಡೆಯಲಿರುವ ದೇವರ ದಾಸಿಮಯ್ಯನವರ ಜಯಂತಿ ಅಂಗವಾಗಿ ಮಕ್ಕಳಿಗೆ ವಚನ ಸ್ಪರ್ಧೆ, ನಿಬಂಧ ಸ್ಪರ್ಧೆ ಹಾಗೂ ಭಾಷಣ ಸ್ಪರ್ಧೆಗಳನ್ನು ಮಾರ್ಚ್ 30ರಂದು ಮುಂಜಾನೆ 11 ಗಂಟೆಗೆ ಶ್ರೀ ಹಳೆ ಬನಶಂಕರಿ ದೇವಸ್ಥಾನದ ಆವರಣದಲ್ಲಿರುವ ಶ್ರೀ ಬನಶಂಕರಿ ದೇವಿ ಸಭಾಭವನದ ಕಲ್ಯಾಣಮಂಟಪ ಮತ್ತು ನೌಕರ ಸಂಘದ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಜಿಲ್ಲಾ ನೇಕಾರ ಸಮುದಾಯಗಳ ಮಕ್ಕಳು ಇದರಲ್ಲಿ ಭಾಗವಹಿಸಬಹುದು.

7ರಿಂದ 12 ವರ್ಷದ ಮಕ್ಕಳಿಗೆ ವಚನ ಸ್ಪರ್ಧೆ, 13ರಿಂದ 18 ವರ್ಷದ ಮಕ್ಕಳಿಗೆ ಶ್ರೀ ದೇವರ ದಾಸಿಮಯ್ಯನವರ ಜೀವನಚರಿತ್ರೆ ನಿಬಂಧ ಸ್ಪರ್ಧೆ, 18 ವರ್ಷ ಮೇಲ್ಪಟ್ಟ ಮಕ್ಕಳು ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ತೀರ್ಪುಗಾರರಾಗಿ ರಾಘವೇಂದ್ರ ಕೊಪ್ಪಳ, ಅರವಿಂದ ಗಂಜಿ, ಗೀತಾ ದೇವಾಂಗಮಠ, ಶ್ರೀಮತಿ ಬಿಜಲಿ, ದೊಡ್ಡಪ್ಪ ಮೂಲಿಮನಿ ಆಗಮಿಸಲಿದ್ದಾರೆ. ಎಲ್ಲ ನೇಕಾರ ಸಮಾಜ ಬಾಂಧವರು ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಜಿಲ್ಲಾ ದೇವಾಂಗ ಸಂಘದ ಅಧ್ಯಕ್ಷರಾದ ದಶರಥರಾಜ ಕೊಳ್ಳಿ ಮತ್ತು ದೇವರ ದಾಸಿಮಯ್ಯ ಪ್ರತಿಷ್ಠಾಪನ ಸಮಿತಿ ಅಧ್ಯಕ್ಷ ಅನಿಲ ಗಡ್ಡಿ ವಿನಂತಿಸಿರುವುದಾಗಿ ಸಂಘದ ಕಾರ್ಯದರ್ಶಿ ವಸಂತ ತಿಳಿಸಿದ್ದಾರೆ.

### ನರೇಗಾ ಕೂಲಿ ಎಪ್ರಿಲ್ 1 ರಿಂದ 370 ರೂಪಾಯಿಗೆ ಹೆಚ್ಚಳ: ಜಿ.ಪಂ ಸಿಇಓ ಭರತ್ ಎಸ್

# ಬಡ ಕುಟುಂಬಗಳ ಜೀವನೋಪಾಯಕ್ಕೆ ಭದ್ರತೆ

■ ವಿಜಯಸಾಕ್ಷಿ ಸುದ್ದಿ, ಗದಗ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2025ರ ಎಪ್ರಿಲ್ 1ರಿಂದ ಪ್ರತಿ ದಿನಕ್ಕೆ 370 ರೂ ಕೂಲಿಯನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯವು ನಿಗದಿಪಡಿಸಿದೆ. ಈ ಮೂಲಕ ಗ್ರಾಮೀಣ ಭಾಗದ ಬಡ ಕುಟುಂಬಗಳ ಜೀವನೋಪಾಯಕ್ಕೆ ಭದ್ರತೆ ಹೆಚ್ಚಿಸಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಭರತ್ ಎಸ್ ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಚೇರಿಯಲ್ಲಿ ಸಿಬ್ಬಂದಿಗಳ ಸಭೆಯಲ್ಲಿ ಮಾತನಾಡಿದ ಅವರು, ಸ್ಥಳೀಯವಾಗಿ ನಿರಂತರ ಉದ್ಯೋಗ ಒದಗಿಸುವ ಉದ್ದೇಶದಿಂದ ಜಿಲ್ಲೆಯ ಎಲ್ಲಾ ಗ್ರಾ.ಪಂಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ನರೇಗಾ ಯೋಜನೆಯಡಿ ಅರ್ಹ ನೋಂದಾಯಿತ ಕುಟುಂಬಗಳಿಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯವು ರೂ. 349ರಿಂದ ರೂ. 370ಕ್ಕೆ ಕೂಲಿ ದರವನ್ನು ಹೆಚ್ಚಿಸಿದ್ದು, ಉದ್ಯೋಗ ಚೀಟಿದಾರ ಕೂಲಿಕಾರರು ಈ ಸೌಲಭ್ಯವನ್ನು 2025ರ ಎಪ್ರಿಲ್ 1ರಿಂದ ಪಡೆಯಬಹುದು ಎಂದರು.



ನರೇಗಾ ಯೋಜನೆಯಡಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮಾಡುವುದು ಪ್ರಮುಖ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ಪ್ರತಿ ಗ್ರಾ.ಪಂನಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಉಪಚಾರದ ಗ್ರಾಮೀಣ ಕೆರೆ ಹೂಳೆತ್ತುವ ಕಾಮಗಾರಿ, ಬದು ನಿರ್ಮಾಣ, ಕೊಳವೆ ಬಾವಿ, ಮರು ಪೂರಣ ಘಟಕ, ನಾಲಾ ಅಭಿವೃದ್ಧಿ, ಅರಣ್ಯೀಕರಣ, ರೇಷ್ಮೆ ಬೆಳೆ, ತೋಟಗಾರಿಕೆ, ಗೋಕಟ್ಟೆ ನಿರ್ಮಾಣದಂತಹ ಇನ್ನೂ ಹಲವು ಕಾಮಗಾರಿಗಳಲ್ಲಿ ಕೂಲಿಕಾರರಿಗೆ ಸ್ಥಳೀಯವಾಗಿ ಉದ್ಯೋಗ ಒದಗಿಸಲು ಯೋಜನೆ ರೂಪಿಸಲಾಗಿದೆ. ಮನರೇಗಾ ಯೋಜನೆಯಡಿ ಕೆಲಸ ಮಾಡಿದ ಕೂಲಿಕಾರರಿಗೆ ಕೂಲಿ ಹಣವನ್ನು ಇ-ಎಫ್‌ಎಂಎಸ್ ಮುಖಾಂತರ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ ಎಂದು ತಿಳಿಸಿದರು.

> ಮಹಿಳೆ ಹಾಗೂ ಪುರುಷರಿಗೆ ಸಮಾನ ಕೂಲಿ ನೀಡುವುದರಿಂದ ಸದರಿ ಪ್ರಯೋಜನವನ್ನು ಉದ್ಯೋಗ ಚೀಟಿ ಹೊಂದಿರುವ ಗ್ರಾಮೀಣ ಕುಟುಂಬಗಳು ಪಡೆದುಕೊಳ್ಳುವುದು ಹಾಗೂ ಜಿಲ್ಲೆಯ ಎಲ್ಲಾ ಗ್ರಾ.ಪಂಗಳಲ್ಲಿ ಬೇಸಿಗೆ ಕಾಲದ ಹಿನ್ನೆಲೆಯಲ್ಲಿ ಗ್ರಾಮೀಣ ಜನರು ಉದ್ಯೋಗ ಬೇಡಿಕೆ ನೀಡಿದ ತಕ್ಷಣ ಉದ್ಯೋಗ ಒದಗಿಸಲು ಹಾಗೂ ಸಕಾಲದಲ್ಲಿ ಕೂಲಿ ಪಾವತಿ ಮಾಡಲು ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಅನುಷ್ಠಾನ ಇಲಾಖೆಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.
>
> **– ಭರತ್ ಎಸ್. ಜಿ.ಪಂ ಸಿಇಓ.**

ಮುಖ್ಯವಾಗಿ ನರೇಗಾ ಯೋಜನೆಯಡಿ ಐ.ಇ.ಸಿ ಚಟುವಟಿಕೆಗಳ ಮುಖಾಂತರ ಗ್ರಾಮೀಣ ಪ್ರದೇಶಗಳಲ್ಲಿನ ಹಿರಿಯ ನಾಗರಿಕರಿಗೆ, ವಿಶೇಷ ಚೇತನರಿಗೆ, ಲಿಂಗತ್ವ ಅಲ್ಪಸಂಖ್ಯಾತರಿಗೆ ಹಾಗೂ ಮಹಿಳೆಯರಿಗೆ ಸ್ಥಳೀಯವಾಗಿ ಉದ್ಯೋಗ ಒದಗಿಸಲು ಅಗತ್ಯ ಕ್ರಮವಹಿಸಲಾಗಿದೆ. ಎಲ್ಲಾ ಗ್ರಾ.ಪಂಗಳಲ್ಲಿ ಮಾಹಿತಿ, ಶಿಕ್ಷಣ ಮತ್ತು (ಐ.ಇ.ಸಿ) ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೂಲಿಕಾರರನ್ನು ಸಂಘಟಿಸಿ 50 ಕೂಲಿಕಾರರಿರುವ ಕಾರ್ಮಿಕ ಸಂಘಗಳನ್ನು ರಚಿಸಿ ಅದಕ್ಕೆ ಒಬ್ಬ ಕಾಯಕ ಬಂಧುವನ್ನು ನೇಮಿಸಿ ಅವರುಗಳ ಮೂಲಕ ಕೂಲಿ ಬೇಡಿಕೆ ಪಡೆಯಲು ಗ್ರಾ.ಪಂ ವಾರ್ಡ್‌ಗಳಲ್ಲಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಕಾಲೋನಿಗಳಲ್ಲಿ ವಿಶೇಷ ಅಭಿಯಾನಗಳನ್ನು ಆಯೋಜಿಸಿ ಕೂಲಿಕಾರರಿಂದ ಕೂಲಿ ಬೇಡಿಕೆ ಪಡೆದು ಸಮಯಕ್ಕೆ ಸರಿಯಾಗಿ ಕೆಲಸ ಒದಗಿಸಲಾಗುವುದು ಎಂದರು.

## ನಿಜಸುಖಿ ಸಮುದಾಯ ಭವನಕ್ಕೆ ಅನುದಾನ



■ ವಿಜಯಸಾಕ್ಷಿ ಸುದ್ದಿ, ಗದಗ

ಶಹರದಲ್ಲಿರುವ ಜಿಲ್ಲಾ ಹಡಪದಅಪ್ಪಣ್ಣ ಸಮಾಜ ಸೇವಾ ಸಂಘದ ನಿಜಸುಖಿ ಸಮುದಾಯ ಭವನದ ಕಟ್ಟಡ ನಿರ್ಮಾಣಕ್ಕೆ ಗದಗ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕಾನೂನು ಮತ್ತು ಪ್ರವಾಸೋದ್ಯಮ ಸಚಿವರಾದ ಎಚ್.ಕೆ. ಪಾಟೀಲರು 15 ಲಕ್ಷ ರೂ ಅನುದಾನವನ್ನು ಬಿಡುಗಡೆ ಮಾಡಿದ ಪತ್ರವನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಡಿ.ಆರ್. ಪಾಟೀಲ, ಯುವ ನಾಯಕ ಕೃಷ್ಣಗೌಡ ಎಚ್.ಪಾಟೀಲ, ಸಿದ್ದನಗೌಡ ಪಾಟೀಲ, ಪ್ರಭು ಬುರಬುರೆ, ಬಿ.ಬಿ. ಅಸೂಟಿ ಮುಂತಾದವರಿದ್ದರು. ಸಮಾಜದ ಜಿಲ್ಲಾಧ್ಯಕ್ಷರಾದ ಮೋಹನ ಚಂದಪ್ಪನವರ, ಜಿಲ್ಲಾ ಕಾರ್ಯದರ್ಶಿ ಎ.ವಿ. ಪ್ರಭು, ಉಪಾಧ್ಯಕ್ಷ ಕಲ್ಲೇಶಪ್ಪ ಕುಡಗುಂಟಿ, ನಿರ್ದೇಶಕರಾದ ಪುಟ್ಟರಾಜ ಹಾಲಕೇರಿ, ಜಗದೀಶ ಹಡಪದ, ವಿರೂಪಾಕ್ಷಿ ಮುಗತೂರ, ಅಕ್ಷಯ ಅಣ್ಣಿಗೇರಿ, ಸತೀಶ ಹಡಪದ ಮೊದಲಾದವರು ಹಾಜರಿದ್ದರು.

### ಜಿಲ್ಲಾಸ್ಪತ್ರೆಗೆ ಕೆ.ಎಚ್. ಪಾಟೀಲರ ಹೆಸರಿಡಲು ಬಿಜೆಪಿಯಿಂದ ತೀವ್ರ ವಿರೋಧ

# ಪುಟ್ಟರಾಜ ಗವಾಯಿಗಳ ನಾಮಕರಣಕ್ಕೆ ಒತ್ತಾಯ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಮೆಡಿಕಲ್ ಕಾಲೇಜಿಗೆ ದಿ ಕೆ.ಎಚ್. ಪಾಟೀಲ ಅವರ ಹೆಸರನ್ನು ಘೋಷಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಗದಗ ಜಿಲ್ಲಾ ಬಿಜೆಪಿ ತೀವ್ರವಾಗಿ ವಿರೋಧಿಸಿದೆ. ಈ ಭಾಗದ ನಡೆದಾಡುವ ದೇವರೆಂದೇ ಹೆಸರಾದ ಪಂ. ಪುಟ್ಟರಾಜ ಗವಾಯಿಗಳ ಹೆಸರನ್ನು ಮೆಡಿಕಲ್ ಕಾಲೇಜಿಗೆ ನಾಮಕರಣ ಮಾಡುವಂತೆ ಒತ್ತಾಯಿಸಲು ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ನಡೆದ ಪ್ರಮುಖರ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮಲ್ಲಸಮುದ್ರ ಗ್ರಾಮದಲ್ಲಿ ಆಸ್ಪತ್ರೆ ಹಾಗೂ ಮೆಡಿಕಲ್ ಕಾಲೇಜು ನಿರ್ಮಾಣವಾಗಲು ಆ ಗ್ರಾಮದ ಪಾಟೀಲ ಮನೆತನದವರ ಕೊಡುಗೆಯೇ ಕಾರಣ. ಬಹುದಿನಗಳ ಹಿಂದೆಯೇ ಆಸ್ಪತ್ರೆ ಉದ್ದೇಶಕ್ಕೆ ಮಾತ್ರ ಬಳಸುವ ಕರಾರಿನ ಮೇಲೆ 54 ಎಕರೆ ಜಮೀನನ್ನು ಸರ್ಕಾರಕ್ಕೆ ದಾನವಾಗಿ ಕೊಟ್ಟಿದ್ದನ್ನು ಕೂಡಾ ರಾಜ್ಯ ಸರ್ಕಾರ ಸ್ಮರಿಸದೆ ಹೋಗಿದ್ದು ದುರ್ದೈವದ ಸಂಗತಿ. ಸದರಿ ಮೆಡಿಕಲ್ ಕಾಲೇಜು ನಿರ್ಮಾಣವಾಗಲು ಬಿಜೆಪಿ ಶಾಸಕರಾಗಿದ್ದ ದಿ ಎಸ್.ವಿ. ಬಿದರೂರ ಹಾಗೂ ಮುಖ್ಯಮಂತ್ರಿಯಾಗಿದ್ದ ಜಗದೀಶ ಶೆಟ್ಟರ ಅವರ ಇಚ್ಛಾಶಕ್ತಿಯೇ ಕಾರಣ.



> ಸದರಿ ಮೆಡಿಕಲ್ ಕಾಲೇಜು ನಿರ್ಮಾಣದಲ್ಲಿ ಕಾಂಗ್ರೆಸ್ ಸರ್ಕಾರದ ಯಾವ ಪಾತ್ರವೂ ಇಲ್ಲ. ಈಗಾಗಲೇ ಹಲವಾರು ಕಾಲೋನಿಗಳಿಗೆ, ಕಟ್ಟಡಗಳಿಗೆ, ರಸ್ತೆಗಳಿಗೆ, ವೃತ್ತಗಳಿಗೆ, ಕ್ರೀಡಾಂಗಣಗಳಿಗೆ, ರೈತ ಭವನಕ್ಕೆ ಕೆ.ಎಚ್. ಪಾಟೀಲರ ಹೆಸರನ್ನು ಇಡಲಾಗಿದ್ದು, ಸದರಿ ಮೆಡಿಕಲ್ ಕಾಲೇಜಿಗೆ ದಿ ಕೆ.ಎಚ್. ಪಾಟೀಲರ ಹೆಸರನ್ನು ನಾಮಕರಣ ಮಾಡುವದನ್ನು ಕೈ ಬಿಡಬೇಕೆಂದು ಒತ್ತಾಯಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕೆ.ಎಚ್. ಪಾಟೀಲರ ನಾಮಕರಣ ವಿರೋಧಿಸಿ ರಾಜ್ಯಪಾಲರಿಗೆ ಪತ್ರ ಚಳುವಳಿ, ಪಂಜಿನ ಮೆರವಣಿಗೆ ಮಾಡುವದು ಹಾಗೂ ಪಂ. ಪುಟ್ಟರಾಜ ಗವಾಯಿಗಳ ನಾಮಕರಣಕ್ಕೆ ಒತ್ತಾಯಿಸಿ ಅಭಿಪ್ರಾಯ ಸಂಗ್ರಹಕ್ಕೆ ಅಭಿಯಾನ ಕೈಗೊಳ್ಳುವ ಬಗ್ಗೆ ಸಭೆಯು ನಿರ್ಣಯಿಸಿತು. ಜಿಲ್ಲಾಧ್ಯಕ್ಷ ತೋಟಪ್ಪ(ರಾಜು) ಕುರುಡಗಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಪ್ರಮುಖರಾದ ಎಂ.ಎಸ್. ಕರಿಗೌಡ್ರ, ಶ್ರೀಪತಿ ಉಡುಪಿ, ಮೋಹನ ಮಾಳಶೆಟ್ಟಿ, ಎಂ.ಎಂ. ಹಿರೇಮಠ, ಜಗನ್ನಾಥಸಾ ಭಾಂಡಗೆ, ವಿಜಯಕುಮಾರ ಗಡ್ಡಿ, ವಿನಾಯಕ ಮಾನ್ವಿ, ಅಶೋಕ ಕರೂರ, ಸಿದ್ದಣ್ಣ ಪಲ್ಲೇದ, ಅನಿಲ ಅಬ್ಬಿಗೇರಿ, ಚಂದ್ರು ತಡಸದ, ನಾಗರಾಜ ತಳವಾರ, ಮುತ್ತಣ್ಣ ಮುಶಿಗೇರಿ, ಅಶೋಕ ಸಂಕಣ್ಣವರ, ಕೆ.ಪಿ. ಕೋಟಿಗೌಡ್ರ, ಶಿವು ಹಿರೇಮನಿಪಾಟೀಲ, ಸುರೇಶ ಮರಳಪ್ಪನವರ, ಬೂದಪ್ಪ ಹಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ, ಡಿ.ಬಿ. ಕರೀಗೌಡ್ರ, ಮಂಜುನಾಥ ಶಾಂತಗೇರಿ ಉಪಸ್ಥಿತರಿದ್ದರು.

## ಸಂಪಾದಕೀಯ

# ಮೂಲ ಉದ್ದೇಶ ಮರೆತ ಆರ್‌ಟಿಇ

2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಶಾಲಾ ಶಿಕ್ಷಣ ಇಲಾಖೆ, ಶಿಕ್ಷಣ ಹಕ್ಕು ಕಾಯಿದೆ ಅಡಿ ಖಾಸಗಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಗೆ ಸಂಬಂಧಿಸಿದಂತೆ ಅರ್ಜಿ ಆಹ್ವಾನಿಸಿದೆ. ಜೊತೆಗೆ ಹೊಸ ಮಾರ್ಗಸೂಚಿಯನ್ನೂ ಪ್ರಕಟಿಸಿದೆ.

ಹೊಸ ಮಾರ್ಗಸೂಚಿ ಮಾತ್ರವಲ್ಲದೇ ಈ ಹಿಂದಿನ ಮಾರ್ಗಸೂಚಿಗಳನ್ನು ಗಮನಿಸಿದರೆ, ಶಿಕ್ಷಣ ಹಕ್ಕು ಕಾಯಿದೆ ಸರಕಾರಿ ಶಾಲೆಗೆ ಮಾತ್ರ ಸೀಮಿತವಾದಂತಾಗಿದೆ. ಅಂದರೆ ಬಡ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಪ್ರವೇಶ ಸಿಗದಂತೆ ಮಾರ್ಗಸೂಚಿ ಪ್ರಕಟವಾಗಿದೆ. ಹೀಗಾಗಿ ಯೋಜನೆ ಮೂಲ ಉದ್ದೇಶ ಮತ್ತೊಮ್ಮೆ ಪರಿಶೀಲನೆಗೆ ಒಳಗಾಗಬೇಕಿದೆ.

ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಅಂದರೆ ಎಲ್ಲರಿಗೂ ಶಿಕ್ಷಣ ಸಿಗಬೇಕು. ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು ಎನ್ನುವುದು. ಆದರೆ ಆರಂಭದಲ್ಲಿ ಈ ಯೋಜನೆಯನ್ನು, ಬಡವರ ಮಕ್ಕಳು ಖಾಸಗಿ ಶಾಲೆಯಲ್ಲಿ ಪ್ರವೇಶ ಪಡೆಯಲು ಇರುವ ಯೋಜನೆ ಎಂಬಂತೆ ಬಿಂಬಿಸಲಾಯಿತು. ಬಡ ಪಾಲಕರು, ತಮ್ಮ ಮಕ್ಕಳು ಪ್ರತಿಷ್ಠಿತ ಶಾಲೆಗಳಲ್ಲಿ ಕಲಿಯಲಿ ಎಂದು ಆರ್‌ಟಿಇ ಅಡಿ ಅರ್ಜಿ ಸಲ್ಲಿಸಿದರು.

ಆರಂಭದ ಕೆಲ ವರ್ಷ ಖಾಸಗಿ ಶಾಲೆಗಳಲ್ಲಿ ಸರಕಾರದ ಹಣದಲ್ಲಿ ಪ್ರವೇಶ ಪಡೆಯುವ ಉದ್ದೇಶಕ್ಕೆ ಆರ್‌ಟಿಇ ಬಳಕೆಯಾಗಿದ್ದೆ ಹೆಚ್ಚು. ಯಾವಾಗ ಆರ್‌ಟಿಇ ಅಡಿ ಖಾಸಗಿ ಶಾಲೆಗಳಲ್ಲಿ ಪ್ರವೇಶ ಪಡೆದ ಮಕ್ಕಳ ಶಿಕ್ಷಣ ವೆಚ್ಚ ಭರಿಸಲು ಸರಕಾರಕ್ಕೆ ಕಷ್ಟವಾಯಿತೊ, ಆಗ ವರಸೆ ಬದಲಿಸಿತು.

ಯಾವ ಮಕ್ಕಳಿಗೆ ಸಮೀಪದಲ್ಲಿ ಸರಕಾರಿ ಶಾಲೆ ಇಲ್ಲವೋ ಅಂಥ ಮಕ್ಕಳಿಗೆ ಮಾತ್ರ ಖಾಸಗಿ ಶಾಲೆಗೆ ಸೇರ್ಪಡೆ ಮಾಡಲು ಮಾತ್ರ ಆರ್‌ಟಿಇ ಸೀಮಿತವಾಯಿತು. ಮೂರು ಕಿಲೋ ಮೀಟರ್ ಅಂತರದಲ್ಲಿ ಸರಕಾರಿ ಶಾಲೆ ಇರದಿದ್ದರೆ, ಅದೇ ವ್ಯಾಪ್ತಿಯಲ್ಲಿ ಖಾಸಗಿ ಶಾಲೆಗೆ ಪ್ರವೇಶ ನೀಡುವ ಮಾರ್ಗಸೂಚಿ ಪ್ರಕಟವಾದ ನಂತರ ಆರ್‌ಟಿಇ ಅಡಿ ಅರ್ಜಿ ಸಲ್ಲಿಸುವವರ ಸಂಖ್ಯೆ ಕುಸಿಯಲು ಆರಂಭವಾಯಿತು.

ಇತ್ತೀಚಿನ ವರ್ಷಗಳಲ್ಲಿ ಆರ್‌ಟಿಇ ಅಡಿ ಅರ್ಜಿ ಸಲ್ಲಿಸಲು ಯಾರೊಬ್ಬರೂ ಮುಂದೆ ಬರುತ್ತಿಲ್ಲ. ಆದರೂ ಸರಕಾರ, ಶಾಲಾ ಶಿಕ್ಷಣ ಇಲಾಖೆ ಪ್ರತಿ ವರ್ಷ ಆರ್‌ಟಿಇ ಅಡಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸುತ್ತದೆ. ಆದರೆ ಅರ್ಜಿಗಳೆ ಬರುವುದಿಲ್ಲ. ಹೀಗಾಗಿ ಆರ್‌ಟಿಇ ಯೋಜನೆ ಮತ್ತೊಮ್ಮೆ ಪರಿಶೀಲನೆಗೆ ಒಳಗಾಗುವ ಅಗತ್ಯವಿದೆ.

ಕವನ

## ಮತ್ತೆ ಮರಳಿದೆ ಯುಗಾದಿ



ಪ್ರಕೃತಿಯ ನಗುವಾಗಿ ಗಿಡಮರಗಳ ಚಿಗುರಾಗಿ
ಸಂತೋಷದ ಸೆಲೆಯಾಗಿ ನಿಸರ್ಗದ ಉಸಿರಾಗಿ
ಕಾಲ ಉರುಳುತ್ತ ಮರಳಿತು ಮತ್ತೆ ಹಸಿರಾಗಿ
ಬಂದಿತು ಹೊಸತನವನೊತ್ತು ಯುಗಾದಿ.
ಮಳೆರಾಯ ಮರಳುವನು ಧರೆಗೆ ಹರಸಿ
ಅನ್ನದಾತನ ಆಸೆಯ ಅಣತೆಯನು ವಿರಿಸಿ
ವನ್ಯಜೀವಿ, ಅನ್ಯ ಸಂಕುಲ ಸಂತತಿ ಸಂತೈಸಿ
ಸಲುವುವ, ಜೀವಜಲದ ವರ್ಷಾರಂಭದ ಯುಗಾದಿ.
ಜನಮನದಲ್ಲಿ ಭರವಸೆಯ ಬೆಳಕಾಗಿ
ಹರ್ಷೋಲ್ಲಾಸದ ಬದುಕಲ್ಲಿ ಖುಷಿಯಾಗಿ
ವರ್ಷವಿಡೀ ಬೇವು–ಬೆಲ್ಲವನು ಸಮನಾಗಿ
ತೂಗಲು ಮತ್ತೆ ಮರಳಿದ ಯುಗಾದಿ.
ಆ ದಿನದ ಕಹಿ ಮರೆಸಿ ಈ ದಿನಕೆ ಸಿಹಿ ಬೆರೆಸಿ
ಮತ್ತೊಂದು ಮುಗದೊಂದು ಆಸೆಗಳ ಹೆಚ್ಚಿಸಿ
ಬದುಕಿನ ಉತ್ಸಾಹವನು ಉತ್ತುಂಗಕೆ ಹಾರಿಸಿ
ಕನವರಿಸುವ ಕನಸನ್ನು ನನಸಾಗಿಸುವ ಯುಗಾದಿ.

– ಡಾ. ಕಲ್ಲೇಶ ಡಿ ಮೂರಶಿಳ್ಳಿನ. ಗದಗ.

## ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಮ್



■ ವಿಜಯಸಾಕ್ಷಿ ಸುದ್ದಿ, ಧಾರವಾಡ

ವಿಜ್ಞಾನ, ಕಲೆ ಮತ್ತು ವಾಣಿಜ್ಯ ಪದವಿ ಕಾರ್ಯಕ್ರಮಗಳನ್ನು ನೀಡುವ ಅನೇಕ ಪದವಿ ಕಾಲೇಜುಗಳಲ್ಲಿ ಸ್ಟಾರ್ಟ್‌ಅಪ್ ಇನ್ಕ್ಯುಬೇಟರ್‌ಗಳನ್ನು ಸ್ಥಾಪಿಸುವ ಅಗತ್ಯವಿದೆ ಮತ್ತು ವಿದ್ಯಾರ್ಥಿಗಳಿಗೆ ಸ್ಟಾರ್ಟ್‌ಅಪ್‌ಗಳನ್ನು ಪ್ರಾರಂಭಿಸಲು ಸರಕಾರ ಸಹಾಯ ಮಾಡುತ್ತದೆ ಎಂದು ಧಾರವಾಡದ ಕೃವಿವಿ ಕುಲಪತಿ ಡಾ. ಪಿ.ಎಲ್. ಪಾಟೀಲ್ ಅಭಿಪ್ರಾಯಪಟ್ಟರು.

ಅವರು 5 ದಿನಗಳ ಕಾಲ ನಡೆದ ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಮ್‌ನ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಭಾರತ ಈಗ ಉದ್ಯಮಶೀಲತೆ ಅಭಿವೃದ್ಧಿ ಕ್ಷೇತ್ರದಲ್ಲಿ ಮುನ್ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಸಮಾಜದ ಸಮಸ್ಯೆಗಳನ್ನು ಪರಿಹರಿಸಲು ಅದ್ಭುತವಾದ ಆಲೋಚನೆಗಳನ್ನು ಹೊಂದಿದ್ದಾರೆ. ಸ್ಟಾರ್ಟಪ್ ಇನ್‌ಕ್ಯುಬೇಶನ್ ಸೆಂಟರ್‌ಗಳನ್ನು ಸ್ಥಾಪಿಸುವುದರಿಂದ ಕಲ್ಪನೆಯನ್ನು ವಾಣಿಜ್ಯ ಉತ್ಪನ್ನವಾಗಿ ಪರಿವರ್ತಿಸಲು ಅನುಕೂಲವಾಗುತ್ತದೆ. ಇದು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಮಾತ್ರವಲ್ಲದೆ ಸಮಾಜದ ಎಲ್ಲ ಸದಸ್ಯರಿಗೂ ಸಹಾಯ ಮಾಡುತ್ತದೆ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮವನ್ನು ಸ್ವಾಗತಿಸಿದ ಪ್ರಧಾನ ಸಂಶೋಧಕ ಹಾಗೂ ಕಾರ್ಯನಿರ್ವಾಹಕ ಅಧಿಕಾರಿ ಡಾ. ಎಸ್.ಎಸ್. ಡೊಳ್ಳಿ, ಉದ್ಯಮಶೀಲತೆಯ ಮಹತ್ವವನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಅನೇಕ ವಿಷಯ ತಜ್ಞರು ತಮ್ಮ ಜ್ಞಾನವನ್ನು ಹಂಚಿಕೊಂಡರು.

# ಜೀವನದ ಸಾರ ತಿಳಿಸುವ 'ಯುಗಾದಿ'



ಯುಗಯುಗ ಕಳೆದು ಹೊಸತನದ ಕನಸಿನೊಂದಿಗೆ ಮನದ ಜಾಡ್ಯವಳಿದು, ಮತ್ತೆ ಹೊಸ ಆಶಯದ ಚಿಗುರ ಮೊಳೆತು, ಕಹಿ ಅನುಭವದ ಕೊಳೆಯ ತೊಳೆದು ನವ ಸಿಹಿ–ಕಹಿ ಒಳಗೊಂಡ ಜೀವನದ ಸಾರ ತಿಳಿಯಲು ಹೊರಡುವುದು ಹೊಸ ವರುಷದ ಪಯಣ. ಪ್ರಕೃತಿಯ ಸಮತೋಲನದ ಕಾಲವನ್ನು ಹೊಸ ವರುಷವಾಗಿ ಆಚರಿಸುವುದರ ಮೂಲಕ ಶತಮಾನದಿಂದಲೂ ಯುಗಾದಿಯ ಹಬ್ಬದ ಆಚರಣೆ ನಡೆದು ಬಂದಿದೆ.

ಈ ಹಬ್ಬವು ಹೊಸಯುಗದ ಆರಂಭವನ್ನು ಸಂಕೇತಿಸುತ್ತ, ಚೈತ್ರ ಮಾಸದ ಮೊದಲ ದಿನ ಬರುತ್ತದೆ. ಯುಗಾದಿಯ ದಿನ ಚಂದ್ರನು ಮೇಷ ರಾಶಿಯಲ್ಲಿ ಪ್ರವೇಶಿಸುವ ಈ ಕಾಲ ಜ್ಯೋತಿಷ್ಯ ಶಾಸ್ತ್ರದಲ್ಲಿ ಹೊಸ ಚಕ್ರದ ಆರಂಭವನ್ನು ಸೂಚಿಸುತ್ತದೆ. ಈ ದಿನ ಹೊಸ ಬಟ್ಟೆಗಳನ್ನು ಧರಿಸಿಕೊಂಡು ಹೊಸ ಪಂಚಾಂಗವನ್ನು ಓದುವುದರ ಮೂಲಕ ಹೊಸ ವರುಷಗಳಲ್ಲಿ ಮಳೆ–ಬೆಳೆ, ವ್ಯಾಪಾರ–ವಹಿವಾಟು ಮಾಹಿತಿ ತಿಳಿದು ಬರುತ್ತದೆ.

ಯುಗಾದಿಯ ವೇಳೆಗೆ ವಸಂತ ಋತು ಪ್ರಾರಂಭವಾಗಿ ಪ್ರಕೃತಿಯ ಹೊಸ ಚಿಗುರು ಹೊಸ ಬೆಳೆಯ ಸುಗ್ಗಿಯ ಆರಂಭವನ್ನು ಸೂಚಿಸುವುದರ ಮೂಲಕ ಚಳಿಗಾಲದ ಚಳಿಯ ತಡೆದು ಚೈತ್ರದ ಚಿಗುರಿನಿಂದ ಹರ್ಷಿಸುವ ನಿಸರ್ಗವು ಜೀವನದಲ್ಲಿ ತಾಳ್ಮೆಯ ಪಾಠ ಕಲಿಸಿ ಕಾಲಚಕ್ರದಲ್ಲಿ ವಸಂತ ಋತುವಿನ ಆಗಮನ ಎಲ್ಲರ ಜೀವನದಲ್ಲಿಯೂ ಬರುವುದು ಎಂಬುದನ್ನು ಸೂಚಿಸುವುದು.

ಹಳೆ ಬೇರು–ಹೊಸ ಚಿಗುರು ಉಭಯದ ಎರಕವು ಮನವೆಂಬ ಮರವನ್ನು ಎತ್ತರಿಸುವುದು ಬಿತ್ತರಿಸುವುದು ಬಾನೆತ್ತರಕ್ಕೆ ಬೆಳಗುವುದು ಎಂಬುದರ ಒಂದು ಸುಂದರ ಸೂಚಕವಾಗಿ ಈ ಹಬ್ಬದ ಆಚರಣೆ ನಡೆದು ಬರುತ್ತದೆ. ಈ ಯುಗಾದಿ ಹಬ್ಬವನ್ನು ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಜನರು ಆಚರಿಸುತ್ತಾರೆ. ಮಹಾರಾಷ್ಟ್ರದಲ್ಲಿ ಇದನ್ನು ಗುಡಿ ಪಾಡ್ವ ಎಂದು ಕರೆಯಲಾಗುವುದು. ಒಂದು ಕೋಲಿಗೆ ವಸ್ತ್ರವನ್ನು ಕಟ್ಟಿ ಅದಕ್ಕೆ ಹೂವಿನ ಹಾರ ಏರಿಸಿ ಮನೆಯ ಒಂದು ಮೂಲೆಯಲ್ಲಿ ಗುಡಿ ಎಂದು ಸಂಕೇತಿಸಿ ಅದನ್ನು ಇರಿಸಲಾಗುತ್ತದೆ. ಇದು ಹೊಸ ವರುಷದ ಆಗಮನಕ್ಕೆ ಸ್ವಾಗತದ ಸೂಚಕವಾಗಿರುತ್ತದೆ.

ಮುಖ್ಯವಾಗಿ ಯುಗಾದಿಯ ದಿನದಂದು ಬೇವು–ಬೆಲ್ಲವನ್ನು ತಿನ್ನುವುದರ ಮೂಲಕ ಜೀವನದಲ್ಲಿ ಕಷ್ಟ–ಸುಖಗಳನ್ನು ಸಮಾನವಾಗಿ ಸ್ವೀಕರಿಸುವುದರ ಮೂಲಕ ತಾಳ್ಮೆ, ಪ್ರೀತಿ, ದಯೆ, ಕರುಣೆ, ವಾತ್ಸಲ್ಯವನ್ನು ಮಂತ್ರವಾಗಿಸಿಕೊಂಡು ಬದುಕನ್ನು ನಡೆಸುವುದರ ದ್ಯೋತಕವಾಗಿದೆ. ಕರಾವಳಿಯ ಭಾಗದಲ್ಲಿ ಈ ದಿನದಲ್ಲಿ ಶುಭ ಸಂಕೇತಗಳಾದ ಬಾಳೆ ಎಲೆಯ ಮೇಲೆ ಅಕ್ಕಿಯನ್ನು ಹಾಕಿ ಅದರ ಮೇಲೆ ತೆಂಗಿನಕಾಯಿ, ಸೌತೆಕಾಯಿ, ರವಿಕೆ ಖಣ, ಹೊಸ ಬಟ್ಟೆ, ಚಿನ್ನ, ಬತ್ತದ ತೆನೆ, ಹಣ್ಣು, ದೇವರ ಪ್ರತಿಮೆ ಇವೆಲ್ಲವನ್ನು ಇಟ್ಟು ಅದರ ಮುಂದೆ ಕನ್ನಡಿಯನ್ನು ಇಡಲಾಗುತ್ತದೆ.

ದೇವರು ಹಾಗೂ ಆ ವಸ್ತುಗಳ ಬಿಂಬ ಆ ಕನ್ನಡಿಯ ಮೇಲೆ ಮೂಡುವಂತೆ ಮಾಡಿ ಅದರ ಮುಂದೆ ದೀಪವನ್ನು ಬೆಳಗುತ್ತಾರೆ. ಈ ದಿನ ವಿಶೇಷವಾಗಿ ಮನೆಯನ್ನು ತಳಿರು–ತೋರಣಗಳಿಂದ ಸಿಂಗರಿಸಿ, ದೇಗುಲಗಳಿಗೆ ಹೋಗಿ ಪ್ರಾರ್ಥಿಸುವುದರ ಮೂಲಕ ಮನೆಯಲ್ಲಿ ಹಿರಿಯರ ಆಶೀರ್ವಾದವನ್ನು ಪಡೆದುಕೊಂಡು ಹೋಳಿಗೆ ಒಬ್ಬಟ್ಟಿನಂತಹ ಸಿಹಿ ಹಬ್ಬದ ಊಟವನ್ನು ಮಾಡಿ ಅದೆಲ್ಲರೊಡನೆ ಕೂಡಿ ಸವಿಯುವುದರ ಮೂಲಕ ಹೊಸ ವರುಷದ ಆಗಮನಕ್ಕೆ ಸ್ವಾಗತ ಕೋರಲಾಗುತ್ತದೆ. ಶತಮಾನದಿಂದಲೂ ಆಚರಿಸುತ್ತಾ ಬರುತ್ತಿರುವ ಹಬ್ಬ ಹರಿದಿನಗಳು ಎಲ್ಲರಿಗೂ ನಮ್ಮ ದೇಶದ ಸಂಸ್ಕಾರ–ಆಚರಣೆಗಳನ್ನು ಕಲಿಸುವುದರ ಮೂಲಕ ಪ್ರತಿ ಹಬ್ಬದ ಹಿಂದಿನ ವೈಜ್ಞಾನಿಕ ಚಿಂತನೆಯನ್ನು ಕೂಡ ತಿಳಿಸಿಕೊಡುತ್ತವೆ.

– ಶಾಂತಲಾ ಹಂಚಿನಾಳ.

# 'ನಮ್ಮೆಲ್ಲರ ಅಮ್ಮ ಕರಿಯಮ್ಮ'

'ಆಧ್ಯಾತ್ಮ ವಿದ್ಯಾ ವಿದ್ಯಾನಾಂ' ಎಂದು ಗೀತೆಯಲ್ಲಿ ಹೇಳಿರುವಂತೆ ಆಧ್ಯಾತ್ಮ ವಿದ್ಯೆಯೇ ವಿದ್ಯೆ ಎಂದು ತಿಳಿದು ಸಾಧನೆ ಮಾಡುವುದು ಸರಿಯಾದ ಮಾರ್ಗ. ದೇಹ, ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳನ್ನು ತಾನೇ ಎಂದು ಭ್ರಮಿಸಿ ಮನಸ್ಸನ್ನು ಬಾಹ್ಯದ ಕ್ಷಣಿಕ ಭಾಗ್ಯಗಳಿಗೆ ಹಾತೊರೆದರೆ ಜನ್ಮ ಸಾಫಲ್ಯವಾದೀತೇ?! ಆ ದಾರಿಯಲ್ಲಿ ಯುವಕವಿ ಶಿವಾನಂದ ಭಜಂತ್ರಿಯವರ ಮೊದಲ ಮೆಟ್ಟಿಲಿನ ಮೊದಲ ಆಧ್ಯಾತ್ಮಿಕ ಕೃತಿಯೇ 'ನಮ್ಮೆಲ್ಲರ ಅಮ್ಮ ಕರಿಯಮ್ಮ' ಕೃತಿ.

ಈ ನೆಲದ ಪ್ರತಿಯೊಂದು ಊರುಗಳಲ್ಲಿ ಐತಿಹಾಸಿಕತೆ ಇರುವ ದೇವಸ್ಥಾನಗಳು ಸಿಗುತ್ತವೆ. ಅದರಲ್ಲಿ ಗದಗಿನ ಪುರವಾಸಿನಿಯಾದ ಕರಿಯಮ್ಮ ದೇವಿಯ ಪುರಾಣವು ಅದ್ಭುತ, ಅಷ್ಟೇ ಸ್ವಾರಸ್ಯಕರವಾದದ್ದು. ಕರಿಯಮ್ಮದೇವಿಯ ಬಗ್ಗೆ ಈಗಾಗಲೇ ನಾಡಿನ ಹಲವಾರು ಲೇಖಕರು, ಕವಿಗಳು ಸಾಕಷ್ಟು ಪುಸ್ತಕಗಳು, ಲೇಖನಗಳು ಬರೆದಿದ್ದಾರೆ. ಮೂಲತಃ ಕೇರಳದ ಮಲೀಯಾಳದಲ್ಲಿ ನೆಲೆಸಿರುವ ದೇವಿಯು ದಿವ್ಯ ಮಹಿಮೆಯನ್ನು, ಅವತಾರಗಳನ್ನು ದುಷ್ಟರ ಶಿಕ್ಷೆ, ಶಿಷ್ಟರ ರಕ್ಷೆಗಾಗಿ ತನ್ನ ಭಕ್ತರ ಸುಖ–ಸಂತೋಷಕ್ಕಾಗಿ ನೆಲೆನಿಂತವಳು ಅಮ್ಮ ಕರಿಯಮ್ಮದೇವಿ.



ಶ್ರೀ ಕರಿಯಮ್ಮದೇವಿಯ ಶಕ್ತಿ, ಭಕ್ತಿ, ಮಮತೆಯಲ್ಲಿ ಕಥಾ ವಸ್ತುವನ್ನಾಗಿಸಿಕೊಂಡು ಉತ್ತಮ ಕವನಗಳನ್ನು ಈ ಕೃತಿಯಲ್ಲಿ ನೋಡಬಹುದು.

ಹೃದಯದ ಅಂತನಾದವನ್ನು ತಾಯಿಯ ಪಾದದಲ್ಲಿ ಇಟ್ಟು ಬೇಡುವ ಭಾವ ಎಲ್ಲರ ಮನವನ್ನು ಸ್ಪಂದಿಸುತ್ತದೆ.

300 ಕ್ಕೂ ಹೆಚ್ಚು ವರ್ಷಗಳ ಇತಿಹಾಸದ ಪುರಾಣಗಳಿಂದ ಅಮ್ಮನ ಗುಣಗಾನ ನಾವು ಕೇಳಬಹುದು, ಪ್ರತ್ಯಕ್ಷ ದರ್ಶನ ಮಾಡಬಹುದು.

ನಗರದ ಮಸಾರಿ ಭಾಗದ ಕರಿಯಮ್ಮನ ಕಲ್ಲು ಬಡಾವಣೆಯಲ್ಲಿ ನೆಲೆಸಿದ ಅಮ್ಮ ಕರಿಯಮ್ಮ ದೇವಿ ಜಾತ್ರೆಯ ಕಡುಬಿನ ಕಾಳಗ ಮಾರ್ಚ್ 31ರ ಸಂಜೆ 7 ಗಂಟೆಗೆ ನಡೆಯಲಿದ್ದು, ವೇದಿಕೆಯಲ್ಲಿ 'ನಮ್ಮೆಲ್ಲರ ಅಮ್ಮ ಕರಿಯಮ್ಮ' ಕೃತಿಯು ಗಣ್ಯಮಾನ್ಯರಿಂದ ಸಕಲ ಭಕ್ತರ ಸಮ್ಮುಖದಲ್ಲಿ ಭಕ್ತಿಪೂರ್ವಕವಾಗಿ ಬಿಡುಗಡೆ–ಯಾಗುತ್ತಿದೆ. ಅಮ್ಮ ಕರಿಯಮ್ಮದೇವಿಯು ಕವಿ ಶಿವಾನಂದ ಭಜಂತ್ರಿಯವರಿಗೆ ಅನುಗ್ರಹಿಸಿ, ಮುಂದೆಯೂ ಅತ್ಯುತ್ತಮವಾದ ಕೃತಿಯನ್ನು ಸಾಹಿತ್ಯ ಲೋಕಕ್ಕೆ ತರಲಿ ಎಂದು ಹಾರೈಸುತ್ತೇನೆ.

– ಡಾ. ತಯಬಅಲಿ ಅ.ಹೊಂಬಳ.
ಮಕ್ಕಳ ಸಾಹಿತಿ, ಗದಗ.

# ಭಾರತೀಯರ ಸಂಸ್ಕೃತಿ–ಆಚರಣೆ ಹೆಚ್ಚಾಗಲಿ

ಹೋಳಿ ಹಬ್ಬದ ರಂಗುಗಳು ಮಾಸಲಾರಂಭಿಸುತ್ತಿದ್ದಂತೆಯೇ ಪ್ರಾರಂಭವಾಗುವ ಹಬ್ಬವೇ ಯುಗಾದಿ. ಹಿಂದೂಗಳ ಹೊಸ ವರ್ಷವನ್ನು ಸೂಚಿಸುವ ಹಬ್ಬವೇ ಈ ಯುಗಾದಿ. ಹಿಂದೂ ಧರ್ಮದಲ್ಲಿ ನಮ್ಮ ಪೂರ್ವಜರು ಹವಾಮಾನಕ್ಕೆ ಅನುಗುಣವಾಗಿಯೇ ದೀಪಾವಳಿ, ಹೋಳಿ, ದಸರಾ, ನಾಗರಪಂಚಮಿ ಸೇರಿದಂತೆ ಬಹುತೇಕ ಹಬ್ಬಗಳನ್ನು ಆಚರಿಸುವ ಪದ್ಧತಿಯನ್ನು ರೂಢಿ ಮಾಡಿದ್ದಾರೆ.

ಪ್ರಕೃತಿಯು ಹೊಸದಾಗಿ ಚಿಗುರು ಎಲೆಗಳಿಂದ ಕಂಗೊಳಿಸುತ್ತಾ, ಸೂರ್ಯನೂ ಕೂಡಾ ದಕ್ಷಿಣಾಯನದಿಂದ ಉತ್ತರಾಯಣದ ಕಡೆಗೆ ಪಥ ಬದಲಿಸಿ ಪ್ರಖರತೆಯನ್ನು ಹೆಚ್ಚಿಸಿಕೊಳ್ಳುತ್ತಾನೆ. ಇಲ್ಲಿ ಎಲ್ಲವೂ ಹೊಸದಾಗಿಯೇ ಇರುವುದರಿಂದ ಯುಗಾದಿ ಹಬ್ಬವನ್ನು ಚೈತ್ರ ಮಾಸದ ಶುಕ್ಲ ಪಕ್ಷದ ಮೊದಲ ದಿನ ಪಾಡ್ಯದಂದು ಆಚರಿಸಲಾಗುತ್ತದೆ. ಪ್ರಪಂಚದಾದ್ಯಂತ ಪ್ರತಿವರ್ಷ ಜನವರಿ 1ರಂದು ಹೊಸ ವರ್ಷವನ್ನು ಆಚರಿಸಲಾಗುತ್ತದೆ. ಆದರೆ ಹಿಂದೂ ಚಾಂದ್ರಮಾನ ಕ್ಯಾಲೆಂಡರ್ ಅಥವಾ ಪಂಚಾಂಗದ ಪ್ರಕಾರ ಹಿಂದೂಗಳಿಗೆ ಯುಗಾದಿ ಹಬ್ಬವನ್ನು




ಆಚರಿಸುವ ದಿನವೇ ಹೊಸ ವರ್ಷದ ಮೊದಲ ದಿನವಾಗಿರುತ್ತದೆ.

ಧಾರ್ಮಿಕ ಪುರಾಣ, ವೇದಗಳಲ್ಲಿ ಯುಗಾದಿ ಎಂದರೆ ಯುಗಗಳ ಆರಂಭ ಎಂದು ವ್ಯಾಖ್ಯಾನಿಸಲಾಗಿದೆ. ಸತ್ಯಯುಗ, ತ್ರೇತಾಯುಗ, ದ್ವಾಪರಾಯುಗ ಮತ್ತು ಕಲಿಯುಗಗಳನ್ನು ಕಾಲಗಣನೆಯ ಪ್ರಮುಖ ಘಟ್ಟಗಳಾಗಿ ನೋಡಿದಾಗ, ಯುಗವೆಂದರೆ ವರ್ಷವೆಂದು ತಿಳಿಯುವದು ಮತ್ತು ಯುಗಾದಿ ಎಂದರೆ ವರ್ಷದ ಆರಂಭ ಎನ್ನುವುದು ಸೂಕ್ತವೆನಿಸುತ್ತದೆ.

ಅಸುರೀ ಶಕ್ತಿಯ ವಿರುದ್ಧ ಸಾತ್ವಿಕ ಶಕ್ತಿಯ ವಿಜಯವೇ ಯುಗಾದಿ ಆಚರಣೆಯ ವೈಶಿಷ್ಟ್ಯತೆಯಾಗಿದೆ. ಈ ದಿನ ಭಗವಂತ ಶ್ರೀರಾಮನು ರಾವಣನನ್ನು ಸಂಹರಿಸಿ ಅಯೋಧ್ಯೆಗೆ ತಲುಪಿ, ರಾಮರಾಜ್ಯವಾಳಲು ಪ್ರಾರಂಭಿಸಿದನು. ಮಹಾ ವಿಷ್ಣು ಮತ್ಸ್ಯಾವತಾರ ತಾಳಿದ್ದು ಕೂಡ ಇದೇ ಶುಭ ಸಂದರ್ಭದಲ್ಲಿ. ಇಂದ್ರನು ವೈಜಯಂತಿ ಮಾಲೆಯನ್ನು ಮತ್ತು ಚಿನ್ನದ ಚಕ್ರಾಧಿಪತ್ಯದ ದ್ವಜವನ್ನು ಚಿದಿರಾಜ್ಯದ ಅರಸು ವಸುವಿನ ತಲೆಯ ಮೇಲೆ ಇಟ್ಟ ದಿನ.

ಯುಗಾದಿ ಹಬ್ಬದ ಆರಂಭಕ್ಕೂ ಮುನ್ನವೇ ಜನರು ಮನೆಯನ್ನು ಸ್ವಚ್ಛಗೊಳಿ, ಸುಣ್ಣ ಬಣ್ಣಗಳನ್ನು ಹಚ್ಚುತ್ತಾರೆ. ಪಾಡ್ಯದಂದು ಮನೆಯ ಅಂಗಳವನ್ನು ಸಗಣಿಯಿಂದ ಬಳಿದು, ರಂಗೋಲಿ ಬಿಡಿಸಿ, ಬಾಗಿಲಿಗೆ ಮಾವಿನ ಎಲೆಗಳಿಂದ ತೋರಣವನ್ನು ಕಟ್ಟುತ್ತಾರೆ. ಈ ದಿನ ಸೂರ್ಯೋದಯಕ್ಕೂ ಮುನ್ನ ಎದ್ದು ಬೇವು ಮಿಶ್ರಿತ ನೀರಿನಿಂದ ಸ್ನಾನ ಮಾಡಿಕೊಂಡು, ಸ್ವಚ್ಛವಾದ ಹೊಸಬಟ್ಟೆಯನ್ನೂ ಧರಿಸಿಕೊಂಡು ಮನೆಯ ದೇವರನ್ನು ಪೂಜಿಸಿ, ಕಿರಿಯರು ಹಿರಿಯರಿಗೆ ಮತ್ತು ಸಂಬಂಧಿಕರಿಗೆ ನಮಸ್ಕರಿಸಿ ಗೌರವ ತೋರುತ್ತಾರೆ. ಪರಸ್ಪರರು ಬೇವು–ಬೆಲ್ಲವನ್ನು ನೀಡುವುದರೊಂದಿಗೆ ಸೇವನೆ ಮಾಡುತ್ತಾರೆ.

ಬೇವು–ಬೆಲ್ಲ ಮಿಶ್ರಣದ ಸೇವನೆ ರೋಗ ನಿರೋಧಕ ಶಕ್ತಿಯ ಪ್ರತೀಕ, ಸೌಂದರ್ಯ ವರ್ಧಕ, ಬ್ಯಾಕ್ಟಿರಿಯಾ ಪ್ರತಿರೋಧಕ, ಔಷಧೀಯ ಗುಣಗಳನ್ನೂ ಹೊಂದಿದೆ. ದೀರ್ಘಾಯಸ್ಸು, ವಜ್ರದಂತೆ ಗಟ್ಟಿಮುಟ್ಟಾದ ದೇಹ, ಸಕಲ ಸಂಪತ್ತುಗಳ ಪ್ರಾಪ್ತಿ ಹಾಗೂ ರೋಗರುಜಿನಗಳ ನಿವಾರಣೆ ಇವೆಲ್ಲವೂ ಬೇವು–ಬೆಲ್ಲ ಭಕ್ಷಣೆಯಿಂದ ಸಾಧ್ಯವಿದೆ.

ವರ್ಷದ ಫಸಲು ಕೈಗೆ ಬಂದು, ಆಗ ತಾನೇ ಸುಗ್ಗಿ ಮುಗಿದು ಹಿಗ್ಗಿನ ಬುಗ್ಗೆಯಾಗಿರುವ ರೈತರಿಗೆ 'ಉಂಡಿದ್ದೇ ಉಗಾದಿ ಮಿಂದಿದ್ದೇ ದೀಪಾವಳಿ' ಎನ್ನುವ ಗಾದೆಯ ಹಾಗೆ ಯುಗಾದಿ ಎಂದರೆ ಸಂಭ್ರಮವೋ ಸಂಭ್ರಮ! ಈ ಹೊಸ ವರ್ಷವನ್ನು ನಿರೀ–ಕ್ಷೆ, ಹೊಸ ಭರವಸೆ ಮತ್ತು ಉತ್ಸಾಹದಿಂದ ಸ್ವಾಗತಿಸೋಣ.



– ಪಾಂಡು ಆಲಪ್ಪ ಚವ್ಹಾಣ.
ಉಪನ್ಯಾಸಕರು, ಬೆಳಧಡಿ.

# ಪ್ರಕೃತಿಯನ್ನು ಅರಳಿಸುವ ಹಬ್ಬ ಯುಗಾದಿ

ಭಾರತ ದೇಶದ ಜೀವಾಳವೇ ಹಬ್ಬಗಳು. ರಸ ಋಷಿಗಳು ಬಾಳಿಬದುಕಿದ ಬೀಡು. ಹಲವು ಸಂಪ್ರದಾಗಳ ತವರೂರು, ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಭವ್ಯ ಭಾರತ ನಮ್ಮ ದೇಶ. ಪ್ರಕೃತಿಯಲ್ಲಿ ವರ್ಷದಲ್ಲಿ ಒಂದು ಸಾರಿ ಬದಲಾವಣೆ ಕಾಣುತ್ತೇವೆ. ಮರ–ಗಿಡಗಳಲ್ಲಿ ಹೊಸ ಚಿಗುರೊಡೆದು ಮದುವಣಗಿತ್ತಿಂತೆ ಕಂಗೊಳಿಸಿ, ಕೋಗಿಲೆಗಳನ್ನು ಬರಮಾಡಿಕೊಳ್ಳುವ ಹಬ್ಬ ಯುಗಾದಿ.

ಹಣ್ಣೆಲೆಗಳ್ಳೆಲ್ಲ ಉದುರಿ, ಮರ–ಗಿಡಗಳೆಲ್ಲ ಹೊಸ ಚಿಗುರಿನೊಂದಿಗೆ ಕಂಗೊಳಿಸುವ ಕಾಲವಿದು. ಪ್ರಕೃತಿಯು ತನ್ನ ಮೈಕೊಡವಿ ಹಸಿರನ್ನುಟ್ಟು ಅಪ್ಸರೆಯಂತೆ ಮೆರೆಯುವ ಸವಿಗಾಲ ಯುಗಾದಿಯ ಕಾಲವಾಗಿದೆ. ಯುಗಾದಿಯಲ್ಲಿ ಚಾಂದ್ರಮಾನ ಯುಗಾದಿ, ಸೌರಮಾನ ಯುಗಾದಿ ಆಚರಣೆಯಲ್ಲಿವೆ. ಚಂದ್ರನ ಚಲನೆಯನ್ನು ಆಧರಿಸಿ ಚಾಂದ್ರಮಾನ ಯುಗಾದಿ ಹಾಗೂ ಸೂರ್ಯನ ಚಲನೆಯನ್ನು ಆಧರಿಸಿ ಸೌರಮಾನ ಯುಗಾದಿ ಎಂದು



ಆಚರಿಸುತ್ತಾರೆ. ನಮ್ಮ ಕರ್ನಾಟಕದಲ್ಲಿ ಚಾಂದ್ರಮಾನ ಯುಗಾದಿ ಆಚರಿಸಿದರೆ, ತಮಿಳುನಾಡು, ಕೇರಳ ಹಾಗೂ ಉತ್ತರ ಭಾರತದಲ್ಲಿ ಸೌರಮಾನ ಯುಗಾದಿಯನ್ನು ಆಚರಿಸಲಾಗುತ್ತದೆ. ಅಲ್ಲದೆ, ಯುಗಾದಿಗೆ ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಮಾತ್ರವಲ್ಲದೆ ಹಬ್ಬದ ಆಚರಣೆಯ ವಿಧಿ ವಿಧಾನಗಳು ವಿಭಿನ್ನವಾಗಿರುತ್ತವೆ.

ಯುಗಾದಿಯ ದಿನದಂದು ವಿಶೇಷವಾಗಿ ಪಂಚಾಗವನ್ನು ಪೂಜಿಸಿ ಪಂಚಾಂಗ ಶ್ರವಣ ಮಾಡಲಾಗುತ್ತದೆ. ಪಂಚಾಂಗವೆಂದರೆ ಹಿಂದೂ ಕ್ಯಾಲೆಂಡರ್. ಇದರಿಂದ ನಮಗೆ ತಿಥಿ, ವಾರ ನಕ್ಷತ್ರ, ಯೋಗ, ಕರಣದ ಪರಿಕಲ್ಪನೆ ಸಿದ್ಧಿಯಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರ ಮನೆಯಲ್ಲಿಯೂ ಪಂಚಾಂಗ ಇರಬೇಕು ಎನ್ನುತ್ತಾರೆ ಹಿರಿಯರು. ಈ ದಿನ ಪ್ರತಿಯೊಬ್ಬರೂ ಹೊಸ ಬಟ್ಟೆ ತೊಡುವುದು, ಹಣೆಗೆ ತಿಲಕವಿಡುವುದು ಹಾಗೂ ನಿತ್ಯ ಪೂಜೆ ಮಾಡುವುದು ರೂಢಿಯಲ್ಲಿದೆ. ಒಟ್ಟಾರೆಯಾಗಿ ಯುಗಾದಿಯು ಸಾಂಪ್ರದಾಯಿಕ ಆಚರಣೆಯೊಂದಿಗೆ ಪ್ರಕೃತಿಯೊಂದಿಗೆ

ನಮ್ಮ ಅವಿನಾಭಾವ ಸಂಬಂಧದ ಪ್ರತೀಕವೆಂದರೆ ತಪ್ಪಾಗಲಾರದು.

ಆದ್ದರಿಂದ ಈ ಹೊಸತನದ ಹುರುಪನ್ನು ಈ ಯುಗಾದಿಯು ನಮ್ಮಲಿ ತರಲಿ ಎಂದು ಈ ಸಂಭ್ರಮದ ಯುಗಾದಿಯನ್ನು ಸಂತೋಷದಿಂದ ಆಚರಿಸೋಣ.



– ಎಸ್.ಕೆ. ಆಡಿನ.
ಶಿಕ್ಷಕರು, ಹೊಳೆಆಲೂರ.

# ಶ್ರೀ ಮಾರುತಿ ದೇವರ ರಥೋತ್ಸವ ಇಂದು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಬಸ್ತಿಬಣದ ಶ್ರೀ ಮಾರುತಿ ದೇವಸ್ಥಾನದ ರಥೋತ್ಸವ ಮಾ.30ರ ಸಂಜೆ 5ಕ್ಕೆ ಜರುಗಲಿದೆ. ಮಾ.31ರಂದು ಸಂಜೆ 5.30ಕ್ಕೆ ಕಡುಬಿನ ಕಾಳಗ ಪಟ್ಟಣದ ಕರೇವಾಡಿಮಠದ ಶ್ರೀ ಮಳೆ ಮಲ್ಲಿಕಾರ್ಜುನ ಶಿವಾಚಾರ್ಯ ಸಾನ್ನಿಧ್ಯದಲ್ಲಿ ಜರುಗಲಿದೆ. ರಥೋತ್ಸವದ ಅಂಗವಾಗಿ ಶನಿವಾರ ಮಾರುತಿ ದೇವಸ್ಥಾನದಲ್ಲಿರುವ ಬಲಮುರಿ ವಿಘ್ನೇಶ್ವರ, ನವಗ್ರಹ, ಶ್ರೀರಾಮ, ಲಕ್ಷ್ಮಣ, ಸೀತಾ ಮಾತಾ ಮೂರ್ತಿಗೆ ಮಹಾರುದ್ರಾಭಿಷೇಕ, ಪೂಜೆಗಳು ನೆರವೇರಿದವು. ತಾಲೂಕಿನ ಅಡರಕಟ್ಟಿ ಗ್ರಾಮದಲ್ಲಿ ಬಸವೇಶ್ವರ ಜಾತ್ರಾಮಹೋತ್ಸವ, ಶಿಗ್ಲಿ ಗ್ರಾಮದಲ್ಲಿ ಆಂಜನೇಯಸ್ವಾಮಿ ರಥೋತ್ಸವ ಸೇರಿ ತಾಲೂಕಿನ ಅನೇಕ ಗ್ರಾಮಗಳಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಜಾತ್ರೆ, ಹಬ್ಬ, ಧಾರ್ಮಿಕ, ಸಾಂಪ್ರದಾಯಿಕ ಕಾರ್ಯಕ್ರಮಗಳು ನೆರವೇರಲಿವೆ.

# ಏ. 2ರಂದು ಪೂರ್ವಭಾವಿ ಸಭೆ

■ವಿಜಯಸಾಕ್ಷಿ ಸುದ್ದಿ, ಗದಗ

ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಅವರ 118ನೇ ಜಯಂತಿಯನ್ನು ಎಪ್ರಿಲ್ 5 ರಂದು ಹಾಗೂ ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿಯನ್ನು ಎಪ್ರಿಲ್ 14 ರಂದು ಆಚರಿಸುವ ಕುರಿತು ಪೂರ್ವಭಾವಿ ಸಭೆ ಎಪ್ರಿಲ್ 2 ರಂದು ಮಧ್ಯಾಹ್ನ 3 ಗಂಟೆಗೆ ಲಕ್ಷ್ಮೇಶ್ವರ ತಾಲೂಕಾ ಪಂಚಾಯತ್ ಸಭಾಭವನದಲ್ಲಿ ಜರುಗಿಸಲಾಗುವುದು. ತಾಲೂಕಾ ಮಟ್ಟದ ಅಧಿಕಾರಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮುಖಂಡರು, ದಲಿತಪರ ಸಂಘಟನೆಗಳ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರು, ಸರ್ವ ಸದಸ್ಯರು, ಗಣ್ಯ ವ್ಯಕ್ತಿಗಳು, ಸಂಘ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಸಲಹೆ ಸೂಚನೆಗಳನ್ನು ನೀಡಬೇಕೆಂದು ಲಕ್ಷ್ಮೇಶ್ವರ ತಹಸೀಲ್ದಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಧರ್ಮದ ಬೆಳಕಿನಿಂದ ಅಜ್ಞಾನ ದೂರ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ



ಗುರಿಯಿಲ್ಲದ ಮತ್ತು ಗುರಿ ಸಾಧಿಸದ ಬದುಕು ನಿರರ್ಥಕ. ಪ್ರಾಣ, ಯೌವನ, ಕಾಲ ಒಮ್ಮೆ ಕಳೆದರೆ ಮತ್ತೆಂದೂ ತಿರುಗಿ ಬರಲಾರವು. ಸದ್ವಿದ್ಯೆ, ಸಂಬಂಧ ಮತ್ತು ಸ್ನೇಹ ನಮ್ಮೊಂದಿಗೆ ಇದ್ದರೆ ಬಾಳೆಲ್ಲ ಸುಖಮಯವಾಗುತ್ತದೆ ಎಂಬ ಶ್ರೀ ಜಗದ್ಗುರು ರೇಣುಕಾಚಾರ್ಯರ ಸತ್ಯ ಸಂದೇಶ ಮರೆಯಲಾಗದು. ವ್ಯಕ್ತಿತ್ವ ವಿಕಸನಕ್ಕೆ ಧರ್ಮ ಆಧ್ಯಾತ್ಮಗಳ ಕೊಡುಗೆ ಅಪಾರ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಯುಗಪುರುಷರಾಗಿ ಅವತರಿಸಿ ಜಾತಿ, ಮತ, ಪಂಥ ಮೀರಿ ಸರ್ವರಿಗೂ ಒಳಿತನ್ನು ಉಂಟು ಮಾಡಿದ್ದನ್ನು ಎಂದಿಗೂ ಮರೆಯಲಾಗದು ಎಂದು ರಂಭಾಪುರಿ ಶ್ರೀಗಳು ತಿಳಿಸಿದರು.

ಮನುಷ್ಯ ಯಾವಾಗಲೂ ಆಶಾವಾದಿಯಾಗಿ ಬದುಕಬೇಕಲ್ಲದೇ ನಿರಾಶಾವಾದಿಗಳಾಗಬಾರದು. ಜೀವನದಲ್ಲಿ ಭರವಸೆ ಎಂಬ ದೀಪ ಎಂದಿಗೂ ಆರಬಾರದು. ಧರ್ಮ ದೀಪದ ಬೆಳಕಿನಿಂದ ಮನುಷ್ಯನ ಅಜ್ಞಾನ ದೂರವಾಗುತ್ತದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ತಾಲೂಕಿನ ತಿರುಮಲಕೊಪ್ಪ ಗ್ರಾಮ ವ್ಯಾಪ್ತಿಯಲ್ಲಿ ಬರುವ ಶ್ರೀ ಜಗದ್ಗುರು ರೇಣುಕ ಧರ್ಮ ನಿವಾಸದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾರಥೋತ್ಸವ ಅಂಗವಾಗಿ ಜರುಗಿದ ಇಷ್ಟಲಿಂಗ ಮಹಾಪೂಜಾ ಮತ್ತು ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಬದುಕಿನ ಚಟುವಟಿಕೆಗಳು ಸಂಪೂರ್ಣ ಸಾಕಾರಗೊಳ್ಳುವುದು ಧಾರ್ಮಿಕ ಮೌಲ್ಯಗಳ ಪರಿಪಾಲನೆಯಿಂದಲೇ ಹೊರತು ಜ್ಞಾನ ಬೋಧನೆಯಿಂದಲ್ಲ. ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಪರಿಸರದಲ್ಲಿ ಪರಿವರ್ತನೆಗೊಂಡಿದ್ದರೂ ಜೀವನ ಮೌಲ್ಯಗಳು ಬದಲಾಗುವುದಿಲ್ಲ. ಸಾಮಾಜಿಕ ವ್ಯವಸ್ಥೆಯ ನಿರ್ಮಾಣಕ್ಕೆ ಆದರ್ಶಗಳೇ ದಾರಿದೀಪ. ಜೀವನ ನಿಂತ ನೀರಾಗಬಾರದು. ಹರಿಯುವ ಪವಿತ್ರ ಗಂಗಾ ಜಲವಾಗಬೇಕು. ಪ್ರಯತ್ನ ಮತ್ತು ಚಲನಶೀಲತೆ ಆದರ್ಶ ಜೀವನದ ಗುಟ್ಟು ಎಂಬುದನ್ನು ಮರೆಯಬಾರದು ಎಂದರು.

ನೇತೃತ್ವ ವಹಿಸಿದ ಸುಳ್ಳ ಪಂಚಗೃಹ ಹಿರೇಮಠದ ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಕಾಲು ಜಾರಿದಾಗ ಆಗುವ ಅನಾಹುತಕ್ಕಿಂತ ನಾಲಿಗೆ ಜಾರಿದಾಗ ಆಗುವ ಅಪಾಯವೇ ಹೆಚ್ಚು. ಧರ್ಮ ಮಾರ್ಗದಲ್ಲಿ ನಡೆದು ಬದುಕು ಕಟ್ಟಿಕೊಳ್ಳಬೇಕೆಂದರು. ಪ್ರಾಸ್ತಾವಿಕ ನುಡಿಗಳನ್ನಾಡಿದ ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಆಧುನಿಕತೆಯ ಹೆಸರಿನಲ್ಲಿ ನಿಜವಾದ ಜೀವನ ಮೌಲ್ಯಗಳು ಕಣ್ಮರೆಯಾಗಬಾರದು. ತಾತ್ವಿಕವಾಗಿ ಬಾಳುವ ಶುದ್ಧ ಶಕ್ತಿ, ಸಾತ್ವಿಕವಾಗಿ ಬದುಕಬೇಕೆಂಬ ಮನಸ್ಸು, ಶುದ್ಧವಾಗಿ ವರ್ತಿಸುವ ಜೀವನ ಬೆಳೆದು ಬಂದಾಗ ಬಾಳು ಸುಂದರಗೊಳ್ಳುತ್ತದೆ ಎಂದರು.

ಸ್ವಾಗತಿಸಿ ನಿರೂಪಿಸಿದ ಉಮದಿ ದಾನಯ್ಯ ದೇವರು ಮಾತನಾಡಿ, ವಸಂತಾಗಮನದಲ್ಲಿ ಸೃಷ್ಟಿ ಹೊಸ ಚೈತನ್ಯ ಹೊಂದುವಂತೆ ಮಾನವ ಜೀವನ ಆದರ್ಶಗಳ ಪರಿಪಾಲನೆಯಿಂದ ಬದುಕಿಗೆ ಬಲ ತರುವ ಕೆಲಸ ಮಾಡಬೇಕಾಗಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ಮೌಲ್ಯಾಧಾರಿತ ವಿಚಾರ ಧಾರೆಗಳು ಸುಖ-ಶಾಂತಿಯ ಬದುಕಿಗೆ ಆಶಾಕಿರಣವಾಗಿವೆ ಎಂದರು. ತಿರುಮಲಕೊಪ್ಪದ ಗುರುಸಿದ್ಧಯ್ಯ ಹಿರೇಮಠ, ಯಲಿವಾಳದ ಶ್ರೀಕಂಠಗೌಡ ಹಿರೇಗೌಡ್ರ, ಸುರಶೆಟ್ಟಿಕೊಪ್ಪದ ಗಂಗಯ್ಯ, ಕುಂದಗೋಳ ಶಾಸಕ ಎಂ.ಆರ್. ಪಾಟೀಲ ಮೊದಲಾದ ಗಣ್ಯರು ಪಾಲ್ಗೊಂಡಿದ್ದರು.

ಕ್ರೋಧಿನಾಮ ಸಂವತ್ಸರದ ಕೊನೆಯ ದಿನವಾದ ಯುಗಾದಿ ಅಮವಾಸ್ಯೆಯಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರುಗಳು ಸಕಲ ಜೀವಾತ್ಮರಿಗೆ ಒಳಿತಾಗಬೇಕು, ಎಲ್ಲರೂ ಸಾಮರಸ್ಯದಿಂದ ಬಾಳಿ ಬದುಕಬೇಕೆಂಬ ಸದುದ್ದೇಶದಿಂದ ಇಷ್ಟಲಿಂಗ ಮಹಾಪೂಜಾ ನೆರವೇರಿಸಿ ಭಕ್ತ ಸಮುದಾಯಕ್ಕೆ ಶುಭ ಹಾರೈಸಿದರು.

# ಕಾಯಕ ಬಂಧುಗಳ ತರಬೇತಿ ಕಾರ್ಯಾಗಾರ



■ವಿಜಯಸಾಕ್ಷಿ ಸುದ್ದಿ, ಗದಗ

ನರೇಗಾ ಯೋಜನೆಯು ಕಾರ್ಮಿಕರಿಗೆ ಆಶಾಕಿರಣವಾಗಿದ್ದು, ಕಾರ್ಮಿಕರ ಕುಟುಂಬದ ಆರ್ಥಿಕ ಪರಿಸ್ಥಿತಿ ಸದೃಢಗೊಳ್ಳಲು ಸಹಕಾರಿಯಾಗಿದೆ ಎಂದು ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಕೇಶವ ಲಮಾಣಿ ಹೇಳಿದರು.

ತಾಲೂಕಿನ ಬೆಳಧಡಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಗ್ರಾ.ಪಂ ಮಟ್ಟದ ಕಾಯಕ ಬಂಧುಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಯಕ ಬಂಧುಗಳ ಕರ್ತವ್ಯ ಹಾಗೂ ಹಕ್ಕುಗಳನ್ನು ಪ್ರತಿಯೊಬ್ಬರೂ ಪಾಲನೆ ಮಾಡಬೇಕು ಎಂದು ತಿಳಿಸಿ, ಯೋಜನೆಯ ಸ್ವರೂಪ, ಕಾಯ್ದೆಯ ರೂಪುರೇಷೆಗಳು ಹಾಗೂ ಒಗ್ಗೂಡಿಸುವಿಕೆ ಬಗ್ಗೆ ವಿವರವಾದ ಮಾಹಿತಿ ನೀಡಿದರು.

ಐಇಸಿ ಸಂಯೋಜಕ ವೀರೇಶ ಮಾತನಾಡಿ, ಕಾಯಕ ಬಂಧುಗಳ ಜವಾಬ್ದಾರಿ ಮಹತ್ವದ್ದಾಗಿದ್ದು, 40 ಕೂಲಿಕಾರರ ಮೇಲೆ ಒಬ್ಬರನ್ನು ಮೇಟಿ ಎಂದು ನೇಮಕ ಮಾಡಲಾಗುವದು ಎಂದು ತಿಳಿಸಿ, ಉದ್ಯೋಗ ಬೇಡಿಕೆ ಅರ್ಜಿ ಸಂಖ್ಯೆ 6 ಮತ್ತು ಹಾಜರಾತಿ ತೆಗೆದುಕೊಳ್ಳುವ ಬಗೆ ಸೇರಿದಂತೆ ಇನ್ನಿತರ ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ, ಮಹಿಳಾ ಸಹಭಾಗಿತ್ವ ಹಾಗೂ ಕೂಲಿಕಾರರು ಕಾಮಗಾರಿ ಸ್ಥಳದಲ್ಲಿ ಆರೋಗ್ಯ ಕಾಪಾಡಿಕೊಳ್ಳುವ ಕುರಿತು ಮಾಹಿತಿ ನೀಡಲಾಯಿತು.

# ಸೃಜನಶೀಲತೆ ಬದುಕಿಗೆ ಆಸರೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ




ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು ಎಂಬಂತೆ ಪ್ರಸ್ತುತ ಬೆಲೆ ಏರಿಕೆಯ ಕಾಲಘಟ್ಟದಲ್ಲಿ ಬದುಕಿನ ಬಂಡಿ ಸರಾಗವಾಗಿ ಸಾಗಲು ಮಹಿಳೆಯರೂ ಕೂಡ ಸ್ವಂತ ಉದ್ಯೋಗ, ಸೃಜನಶೀಲತೆ ರೂಢಿಸಿಕೊಂಡರೆ ಸ್ವಾವಲಂಬಿ ಬದುಕಿಗೆ ಆಸರೆಯಾಗುತ್ತದೆ ಎಂದು ಸೇವಾಮಿತ್ರ ಯೋಜನೆಯ ರಾಜ್ಯ ಸಂಯೋಜಕ ನಟರಾಜ ರಾನಡೆ ಅಭಿಪ್ರಾಯಪಟ್ಟರು.

ಪಟ್ಟಣದ ಹಿಂದೂ ಸೇವಾ ಪ್ರತಿಷ್ಠಾನದಿಂದ ಉಚಿತ ಹೊಲಿಗೆ ತರಬೇತಿ ಪಡೆದ ಮಹಿಳೆಯರಿಗೆ ಪ್ರಮಾಣಪತ್ರ ವಿತರಣಾ ಕಾರ್ಯಕ್ರಮ ನೇರವೇರಿಸಿ ಮಾತನಾಡಿದ ಅವರು, ಹಿಂದೂ ಸೇವಾ ಪ್ರತಿಷ್ಠಾನ ಕಳೆದ 40 ವರ್ಷಗಳಿಂದ ಸೇವಾ ಚಟುವಟಿಕೆ ಮಾಡುತ್ತಿದ್ದು, ಈವರೆಗೆ ಸಾವಿರಾರು ಯುವಕ-ಯುವತಿಯರಿಗೆ ಸೇವಾ ಪ್ರಶಿಕ್ಷಣ, ಸ್ವಯಂ ಉದ್ಯೋಗ ತರಬೇತಿ, ಪ್ರೇರಣೆ ನೀಡಿದೆ. ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕುಗಳಲ್ಲಿ ಎರಡು ಸಾವಿರ ಮಹಿಳೆಯರಿಗೆ ಉಚಿತ ತರಬೇತಿ ನೀಡಲಾಗಿದೆ ಎಂದು ಹೇಳಿದರು.

ಡಾ. ಶರಣಪ್ಪ ಬಿಂಕದಕಟ್ಟಿ ಮಾತನಾಡಿ, ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಬೇಕು. ಅದಕ್ಕಾಗಿ ಅವರು ಹೊಲಿಗೆ ತರಬೇತಿಯಂತಹ ಸ್ವಂತ ಉದ್ಯೋಗಗಳ ತರಬೇತಿ ಪಡೆದುಕೊಳ್ಳಬೇಕು ಎಂದರು. ಅಪ್ಪಾಜಿ ಮಕ್ಕಳ ಬಳಗದ ಮುಖ್ಯಸ್ಥೆ ಹೇಮಾ ಬಾಳಿಕಾಯಿ ಮಾತನಾಡಿ, ಮನೆಯಲ್ಲಿ ತಾಯಂದಿರು ಮಕ್ಕಳಿಗೆ ಬಾಲ್ಯದಲ್ಲಿಯೇ ಹಣದ ಮಹತ್ವ, ದುಡಿಮೆಯ ಕಷ್ಟ, ಬದುಕಿನ ಮೌಲ್ಯ, ಸಂಸ್ಕಾರವನ್ನು ಕೊಟ್ಟರೆ ನಮ್ಮ ಸಮಾಜ ಸುಧಾರಸುತ್ತದೆ ಎಂದು ಹೇಳಿದರು.

ವಕೀಲರಾದ ನಂದಾ ಅಮಾಸಿ, ಲಕ್ಷ್ಮೀ ಓದು ಮಾತನಾಡಿದರು. ತರಬೇತಿ ನೀಡಿದ ಶಿಕ್ಷಕಿ ರುಕ್ಮಿಣಿ ಕಾಕಡೆ ಅವರನ್ನು ಸನ್ಮಾನಿಸಲಾಯಿತು. ಶಂಕರ ಬ್ಯಾಡಗಿ, ಖುಷಿ ಕ್ಷತ್ರಿ, ಚೇತನ ಯಲಿಗಾರ ನಿರೂಪಿಸಿದರು.

### ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿ ಕಾರ್ಯಕ್ರಮದಲ್ಲಿ ಮಹೇಶ ನಿಡಶೇಶಿ

# ಮಹಾನ್ ವ್ಯಕ್ತಿಗಳ ತತ್ವಗಳನ್ನು ಪಾಲಿಸಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ



ಸತ್ಯ ಯುಗದಲ್ಲಿ ಇದ್ದರೆಂದು ನಂಬಲಾಗಿದ್ದ ಅಗ್ನಿ ಬನ್ನಿರಾಯ ಸ್ವಾಮಿಯ ಜನನದ ಉದ್ದೇಶ ಭೂಮಿ, ಸ್ತ್ರೀ ಹಾಗೂ ಗೋವುಗಳನ್ನು ರಕ್ಷಣೆ ಮಾಡುವುದಾಗಿತ್ತು. ಆದ್ದರಿಂದ ಇಂದಿನ ಯುವ ಸಮುದಾಯ ಮಹಾನ್ ವ್ಯಕ್ತಿಗಳ ಸಿದ್ಧಾಂತ, ತತ್ವಗಳನ್ನು ಮೈಗೂಡಿಸಿಕೊಂಡು ಸಾಗಬೇಕಿದೆ ಎಂದು ಪ.ಪಂ ಮುಖ್ಯಾಧಿಕಾರಿ ಮಹೇಶ ನಿಡಶೇಶಿ ಹೇಳಿದರು.

ನರೇಗಲ್ಲ ಪಟ್ಟಣದ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿ ನಿಮಿತ್ತ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಕ್ಷತ್ರಿಯ ಕುಲದವರು ಪರಾಕ್ರಮಿಗಳು ಹಾಗೂ ಧೈರ್ಯವಂತರು. ಇತಿಹಾಸ ಪುಟಗಳಲ್ಲಿ ಕ್ಷತ್ರಿಯ ವರ್ಗ ತನ್ನದೇ ಆದ ಮಹತ್ವದ ಪಾತ್ರವನ್ನು ನಿರ್ವಹಿಸಿದೆ. ನಾಡಿಗಾಗಿ ರಾಜ ಮಹಾರಾಜರು ಬಲಿದಾನವನ್ನು ನೀಡಿದ್ದಾರೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಇತಿಹಾಸವನ್ನು ತಿಳಿದುಕೊಳ್ಳಬೇಕು. 18 ಪುರಾಣಗಳ ಪೈಕಿ 9 ಪುರಾಣಗಳಲ್ಲಿ ಬನ್ನಿರಾಯಸ್ವಾಮಿಯವರ ಬಗ್ಗೆ ಉಲ್ಲೇಖವಿದೆ. ಶಿವನ ತ್ರಿನೇತ್ರದಿಂದ ಹೊರಹೊಮ್ಮಿದ ಒಂದು ಹನಿಯು ಋಷಿಮುನಿಗಳು ಆಚರಿಸುತ್ತಿದ್ದ ಯಾಗದ ಕುಂಡದಲ್ಲಿ ಬಿದ್ದು, ಆ ಕುಂಡದಿಂದ ಅಗ್ನಿ ಬನ್ನಿರಾಯ ಸ್ವಾಮಿ ಉದಯಿಸಿದನೆಂದು ನಂಬಿಕೆಯಿದೆ ಎಂದರು.

ಪ.ಪಂ ಉಪಾಧ್ಯಕ್ಷ ಕುಮಾರಸ್ವಾಮಿ ಕೋರಧಾನ್ಯಮಠ ಮಾತನಾಡಿ, ಹೈದರಾಲಿಯು ಒಂದು ಸುಂದರವಾದ ತೋಟವನ್ನು ನಿರ್ಮಿಸಬೇಕೆಂಬ ಕನಸನ್ನು ಕಂಡಿದ್ದನು. ಹಾಗಾಗಿ ತಮಿಳುನಾಡಿನ ಅರ್ಕಾಟ್ ಪ್ರದೇಶಕ್ಕೆ ದಾಳಿ ಮಾಡಿ ಸುಂದರವಾದ ತೋಟಗಳನ್ನು ನಿರ್ಮಿಸುವುದರಲ್ಲಿ ಕುಶಲತೆ ಹೊಂದಿದ್ದ ತಿಗಳ ಸಮುದಾಯದವರನ್ನು ಕರ್ನಾಟಕದ ಬೆಂಗಳೂರಿನಲ್ಲಿ 60 ಎಕರೆಗೆ ಒಳಪಟ್ಟ ಹೂವಿನ ತೋಟವನ್ನು ನಿರ್ಮಿಸುವಂತೆ ಹೇಳಿದನು. ಹೈದರ್‌ನ ಮಾತಿನಂತೆ ಬೆಂಗಳೂರಿನಲ್ಲಿ ಒಂದು ತೋಟವನ್ನು ನಿರ್ಮಿಸಲಾಯಿತು. ಈ ಸಮುದಾಯದವರು ನಿರ್ಮಿಸಿದ ತೋಟವೇ ಲಾಲ್‌ಬಾಗ್ ಆಗಿದೆ ಎಂದರು.

ಪ.ಪಂ ಅಧ್ಯಕ್ಷ ಫಕೀರಪ್ಪ ಮಳ್ಳಿ, ಸದಸ್ಯರಾದ ಮಲ್ಲಿಕಾರ್ಜುನಗೌಡ ಭೂಮನಗೌಡ್ರ, ಪ.ಪಂ ಸಿಬ್ಬಂದಿಗಳಾದ ರಮೇಶ ಹಲಗಿಯವರ, ಶಂಕ್ರಪ್ಪ ದೊಡ್ಡಣ್ಣವರ, ವೆಂಕಣ್ಣ ಮಡಿವಾಳರ, ಎಂ.ಎಚ್. ಸೀತಿಮನಿ, ಶ್ರೀಕಾಂತ ಎಸ್, ಮಹಾದೇವಪ್ಪ ಮ್ಯಾಗೇರಿ, ನಜ್ಮಾ ಬೇಲೇರಿ, ಕಾವ್ಯ ಅರವಟಗಿಮಠ, ಶೇಖಪ್ಪ ಹೊನ್ನವಾಡ, ನಿರ್ಮಲಾ ಕಡೆತೋಟದ ಮುಂತಾದವರಿದ್ದರು.



ಗದಗ ನಗರದ ಇತಿಹಾಸ ಪ್ರಸಿದ್ಧ ಕಿಲ್ಲಾ ಶ್ರೀ ಜೋಡ ಹನಮಂತ ದೇವಸ್ಥಾನದ ವಿವಿಧ ಕಾಮಗಾರಿ ಹಾಗೂ ಜೀರ್ಣೋದ್ಧಾರ ಕಾರ್ಯಕ್ಕೆ ಸಚಿವರಾದ ಎಚ್.ಕೆ. ಪಾಟೀಲರು 20 ಲಕ್ಷ ರೂಪಾಯಿಗಳನ್ನು ಧಾರ್ಮಿಕ ದತ್ತಿ ಇಲಾಖೆಯಿಂದ ಬಿಡುಗಡೆ ಮಾಡಿದ ಪತ್ರವನ್ನು ನೀಡಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಡಿ.ಆರ್. ಪಾಟೀಲ, ಯುವ ಮುಖಂಡ ಕೃಷ್ಣಗೌಡ ಪಾಟೀಲ, ಟ್ರಸ್ಟಿಗಳಾದ ವಿಶ್ವನಾಥ ರಾಮನಕೊಪ್ಪ, ಪ್ರಮೋದ ರಾಯ್ಕರ್, ರಾಮಣ್ಣಾ ಬಾಕಳೆ, ಮಂಜುನಾಥ ಯಾಳಗಿಶೆಟ್ಟರ, ಆನಂದ ಸರ್ವದೆ, ಅಂಬಾಲಾಲಸಾ ಖೋಡೆ, ನಿರಂಜನ ಓಝಾ, ಬಸವರಾಜ ಪೂಜಾರ, ಪರಶುರಾಮ ದಲಬಂಜನ ಮುಂತಾದವರು ಇದ್ದರು.

# 'ಮುಸ್ಸಂಜೆ ಮಾತು' ಅರಿವು ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಭಾರತ ಸರಕಾರದ ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ ಗುರಿಗಳು-2023ನ್ನು ಒಪ್ಪಿಕೊಂಡಿದ್ದು, ಮಕ್ಕಳ ಆರೋಗ್ಯ ರಕ್ಷಣೆ, ಶಿಕ್ಷಣ ಕ್ಷೇತ್ರಗಳಲ್ಲಿ ಅಭಿವೃದ್ಧಿ, ಸಾಧನೆ ಹಾಗೂ ಹಸಿವು, ತಾರತಮ್ಯ ಮತ್ತು ಶೋಷಣೆ ಕೊನೆಗೂ ಳ್ಳುವುದಕ್ಕೆ ಬದ್ಧವಾಗಿದೆ.

ಈ ಹಿನ್ನೆಲೆಯಲ್ಲಿ ಮಕ್ಕಳ ಪರಿಸ್ಥಿತಿಯನ್ನು ತಳಮಟ್ಟದಿಂದಲೇ ಗಮನಿಸಿ ಅವಶ್ಯಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಎಲ್ಲಾ ಇಲಾಖೆಗಳ ಜನಪ್ರತಿನಿಧಿಗಳು ಮತ್ತು ಸಮುದಾಯದ ಜವಾಬ್ದಾರಿಯಾಗಿದೆ.

ಮಕ್ಕಳ ಪೋಷಕರು ಹಾಗೂ ಸಾರ್ವಜನಿಕರಲ್ಲಿ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ, ಬಾಲ ಮತ್ತು ಕಿಶೋರ ಕಾರ್ಮಿಕ ನಿಷೇಧ ಕಾಯ್ದೆ, ಮಕ್ಕಳ ಅನೈತಿಕ ಸಾಗಾಣಿಕೆ ತಡೆ ಕಾಯ್ದೆ ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ 2025 - 2026ನೇ ಸಾಲಿನಲ್ಲಿ ಗದಗ ಜಿಲ್ಲೆಯ ಆಯ್ದ ಗ್ರಾಮಗಳಲ್ಲಿ 'ಮುಸ್ಸಂಜೆ ಮಾತು' ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ಎಪ್ರಿಲ್ 16ರಂದು ಗಜೇಂದ್ರಗಡ ತಾಲೂಕಿನ ದೊಡ್ಡಮಾರನಬಸರಿ ಹತ್ತಿರ, ಎಪ್ರಿಲ್ 22ರಂದು ಗದುಗಿನ ಎಸ್‌ಎಮ್‌ಕೆ ನಗರ ಆಟೋ ಸ್ಟಾಂಡ್ ಹತ್ತಿರ, ಎಪ್ರಿಲ್ 25ರಂದು ರೋಣ ತಾಲೂಕು ಅನ್ನದಾನೇಶ್ವರಿ ಮಠದ ಹತ್ತಿರ ಅಬ್ಬಿಗೇರಿಯಲ್ಲಿ, ಎಪ್ರಿಲ್ 28ರಂದು ಮುಂಡರಗಿ ತಾಲೂಕು ಡಂಬಳ ಗ್ರಾ.ಪಂ ಆವರಣದಲ್ಲಿ, ಮೇ 7ರಂದು ನರಗುಂದ ತಾಲೂಕಿನ ಶಿರೋಳ ಸಮುದಾಯ ಭವನದಲ್ಲಿ, ಮೇ 14ರಂದು ಲಕ್ಷ್ಮೇಶ್ವರ ತಾಲೂಕು ಕೋಟೆಬಾಗಿಲು ಯಳವತ್ತಿಯಲ್ಲಿ, ಮೇ 22ರಂದು ಮುಳಗುಂದ ಪಟ್ಟಣ ಪಂಚಾಯಿತಿ ಹತ್ತಿರ, ಮೇ 29ರಂದು ಶಿರಹಟ್ಟಿ ತಾಲೂಕಿನ ವರಾಗಡಿಯ ಸರಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಮುಸ್ಸಂಜೆ ಮಾತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗರ್ಭ ಕಂಠದ ಕ್ಯಾನ್ಸರ್ ತಡೆಗಟ್ಟಬಹುದು

■ವಿಜಯಸಾಕ್ಷಿ ಸುದ್ದಿ, ಗದಗ




ಸುಲಭವಾಗಿ ತಡೆಗಟ್ಟಬಹುದಾದ ಗರ್ಭ ಕಂಠದ ಕ್ಯಾನ್ಸರ್ ಭಾರತದಲ್ಲಿ ಮಹಿಳೆಯರನ್ನು ಬಲಿ ತೆಗೆದುಕೊಳ್ಳುವ ಎರಡನೇ ಅತಿದೊಡ್ಡ ಕ್ಯಾನ್ಸರ್ ಕೊಲೆಗಾರನಾಗಿ ಮುಂದುವರೆದಿದೆ. ಪ್ರತಿ ವರ್ಷ ಸುಮಾರು 124,000 ಹೊಸ ಪ್ರಕರಣಗಳು ಪತ್ತೆಯಾಗುತ್ತವೆ ಮತ್ತು ಭಾರತದಲ್ಲಿಯೇ ಸುಮಾರು 77 ಸಾವಿರ ಮಹಿಳೆಯರು ಗರ್ಭಕಂಠದ ಕ್ಯಾನ್ಸರ್‌ನಿಂದ ಸಾಯುತ್ತಾರೆ ಎಂದು ಡಾ. ಶಿಲ್ಪಾ ದಢೂತಿ ತಿಳಿಸಿದರು.

ಇನ್ನರ್‌ವ್ಹೀಲ್ ಕ್ಲಬ್ ಗದಗ-ಬೆಟಗೇರಿ ಹಾಗು ಖಒಂ ಮಹಿಳಾ ಘಟಕ ಇವುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಕ್ಲಬ್‌ನ ಅಧ್ಯಕ್ಷೆ ನಾಗರತ್ನ ಮಾರನಬಸರಿ ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆ (ಘಊಔ) ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವಿಕೆಗಾಗಿ ಹೂಡಿಕೆಯಲ್ಲಿ ಜಾಗತಿಕ ಬದ್ಧತೆಯ ಕರೆ ನೀಡಿದೆ. ವಿಶೇಷವಾಗಿ ಸೀಮಿತ ಸೆಟ್ಟಿಂಗ್‌ಗಳನ್ನು ಹೊಂದಿರುವ ಸಮುದಾಯಗಳಲ್ಲಿ ಮೇ 2018ರಲ್ಲಿ, ಘಊಔ ಮಹಾನಿರ್ದೇಶಕರು ಗರ್ಭಕಂಠದ ಕ್ಯಾನ್ಸರ್‌ನ್ನು ತೊಡೆದುಹಾಕಲು ಕ್ರಮಕ್ಕಾಗಿ ಜಾಗತಿಕ ಕರೆಯನ್ನು ಘೋಷಿಸಿದರು. ಈ ಕ್ಯಾನ್ಸರ್‌ನ್ನು ನಿರ್ಮೂಲನೆ ಮಾಡಲು ಈಗ ಲಭ್ಯವಿರುವ ಸಾಧನಗಳ ಬಗ್ಗೆ ಜಾಗೃತಿ ಮೂಡಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕೆ.ಎಲ್.ಇ ಸಂಸ್ಥೆಯ ಕಲಾ-ವಾಣಿಜ್ಯ ಮಹಾವಿದ್ಯಾಲಯದ ಗೃಹ-ವಿಜ್ಞಾನ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳು ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ ಕರಪತ್ರವನ್ನು ಕಾರ್ಯಕ್ರಮದಲ್ಲಿ ಹಂಚಿದರು.

ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಗೃಹ-ವಿಜ್ಞಾನ ವಿಭಾಗದ ಉಪನ್ಯಾಸಕರಾದ ಪ್ರೊ. ವೀಣಾ ತಿರ್ಲಾಪೂರ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಇನ್ನರ್‌ವೀಲ್ ಕ್ಲಬ್ ಸಹ ಕಾರ್ಯದರ್ಶಿ ಜ್ಯೋತಿ ದಾನಪ್ಪಗೌಡರ ನೀರೂಪಿಸಿ, ವಂದಿಸಿದರು. ಐಎಸ್‌ಓ ಪುಷ್ಪಾ ಭಂಡಾರಿ, ಪ್ರತಿಭಾ ಭದ್ರಶೆಟ್ಟಿ, ಪ್ರೇಮಾ ಹಂದಿಗೋಳ್, ರಾಜರಾಜೇಶ್ವರಿ ಬಳ್ಳಾರಿ, ಅನ್ನಪೂರ್ಣ ವರವಿ, ಪ್ರೇಮಾ ಮೇಟಿ, ಸುಮಾ ಪಾಟೀಲ, ನೀಲಾಂಬಿಕಾ ಉಗಲಾಟದ, ಶಾಂತಾಗೌಡರ ಮುಂತಾದವರು ಉಪಸ್ಥಿತರಿದ್ದರು.

## ಏಪ್ರಿಲ್ 1ರಿಂದ ನರೇಗಾ ಕಾಮಗಾರಿ ಆರಂಭ

**■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಪ್ರಸ್ತುತ ಬೇಸಿಗೆಯ ಸಮಯದಲ್ಲಿ ಬೆಳೆ ಇಲ್ಲದೇ ಖಾಲಿ ಇರುವ ರೈತರ ಜಮೀನುಗಳನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಇಲ್ಲಿಯ ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಎಪ್ರಿಲ್ 1ರಿಂದ ಕಾಮಗಾರಿ ಆರಂಭವಾಗಲಿದೆ. ಈ ಕುರಿತು ಇತ್ತೀಚೆಗೆ ಗ್ರಾಮ ಪಂಚಾಯಿತಿಯಲ್ಲಿ ರೋಜಗಾರ ದಿನಾಚರಣೆಯ ಕಾರ್ಯಕ್ರಮದಲ್ಲಿ ಅಭಿವೃದ್ಧಿ ಅಧಿಕಾರಿ ಅಮೀರನಾಯಕ ವಿವರಣೆ ನೀಡುತ್ತಾ, ದುಡಿಯುವ ಕೈಗಳಿಗೆ ಕೆಲಸ ನೀಡುವ ಉದ್ದೇಶದಿಂದ ಎಪ್ರಿಲ್ 1ರಿಂದ ರೈತರ ಜಮೀನುಗಳಲ್ಲಿ ಬದು ನಿರ್ಮಾಣ, ಸಮುದಾಯ ಕಾಮಗಾರಿಗಳಾದ ದನದ ದೊಡ್ಡಿ, ಕುರಿ ದೊಡ್ಡಿ, ಬಚ್ಚಲು ಗುಂಡಿ, ಶಾಲಾ ಕಾಂಪೌಂಡ್ ನಿರ್ಮಾಣ ಸೇರಿದಂತೆ ಹಲವು ಕಾಮಗಾರಿಗಳಿಗಾಗಿ 1.74 ಕೋಟಿ ರೂಗಳ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ. ಕಾಯಕ ಬಂಧುಗಳು ಉದ್ಯೋಗ ಖಾತ್ರಿ ಯೋಜನೆಯ ಪುಸ್ತಕ ಇರುವ ಕಾರ್ಮಿಕರಿಗೆ ಈ ಕುರಿತು ಮಾಹಿತಿಯನ್ನು ನೀಡಿ ಕೆಲಸಕ್ಕೆ ಕರೆ ತರಬೇಕು. ಯಾವುದೇ ಕಾರಣಕ್ಕೂ ಉದ್ಯೋಗ ಖಾತ್ರಿ ಯೋಜನೆಯ ನಿಯಮ ಉಲ್ಲಂಘನೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ ಮಾತನಾಡಿ, ದೂರ ನಗರ ಪ್ರದೇಶಗಳಿಗೆ ಗುಳೆ ಹೋಗುವುದನ್ನು ತಡೆಗಟ್ಟಲು ಸರಕಾರ ಉದ್ಯೋಗ ಖಾತ್ರಿ ನೀಡಲು ಮುಂದಾಗಿದೆ. ಇದರಿಂದ ರೈತರ ಜಮೀನು ಅಭಿವೃದ್ಧಿಯೊಂದಿಗೆ ಕಾರ್ಮಿಕರಿಗೆ 370 ರೂಗಳ ವೇತನವು ಅವರ ಖಾತೆಗೆ ಜಮೆ ಆಗಲಿದ್ದು, ಪ್ರಾಮಾಣಿಕವಾಗಿ ಕಾಮಗಾರಿ ಆಗುವಂತೆ ಅಧಿಕಾರಿಗಳು ಕಾಳಜಿ ವಹಿಸಬೇಕು ಎಂದರು.ಗ್ರಾ.ಪಂ ಸದಸ್ಯರು, ತಾಂತ್ರಿಕ ಇಂಜಿನಿಯರ್ ಅಜಯ, ತಾ.ಪಂ ಆಯ್.ಇ.ಸಿ ಸಂಯೋಜಕ ವೀರೇಶ ಪಟ್ಟಣಶೆಟ್ಟಿ, ಕಾಯಕ ಬಂಧುಗಳು ಹಾಜರಿದ್ದರು.

### ಕಲಘಟಗಿ ತಾಲೂಕಿನ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಡಿಸಿ, ಸಿಇಓ ಭೇಟಿ, ಪರಿಶೀಲನೆ

# ಪರೀಕ್ಷಾರ್ಥಿಗಳ ಗೈರು ಹಾಜರಿಯ ಕಾರಣ ತಿಳಿಯಿರಿ

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ-1ರ ನಾಲ್ಕನೇ ಪರೀಕ್ಷೆಯಾದ ಸಮಾಜ ವಿಜ್ಞಾನ ಪರೀಕ್ಷೆಯು ಜಿಲ್ಲೆಯಾದ್ಯಂತ ಶನಿವಾರ ಶಾಂತ ರೀತಿಯಿಂದ ಜರುಗಿತು.

ಜಿಲ್ಲಾಧಿಕಾರಿ ದಿವ್ಯ ಪ್ರಭು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಶನಿವಾರ ಬೆಳಿಗ್ಗೆ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿ, ವಿದ್ಯಾರ್ಥಿಗಳ ಹಾಜರಾತಿ, ಗೈರು ಮಾಹಿತಿ ಪಡೆದರು.

ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಧಾರವಾಡ ತಾಲೂಕಿನ ಯರಿಕೊಪ್ಪ, ಕಲಘಟಗಿ ಪಟ್ಟಣದ ಸೇಂಟ್ ಮೇರಿ ಇಂಗ್ಲೀಷ್ ಮಾಧ್ಯಮ ಶಾಲೆ ಮತ್ತು ಜನತಾ ಪ್ರೌಢಶಾಲೆಗಳಲ್ಲಿ ಸ್ಥಾಪಿಸಿರುವ ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳು ಪರೀಕ್ಷೆ ಬರೆಯುವದನ್ನು, ಪರೀಕ್ಷಾ ಕೇಂದ್ರದ ಮೂಲಸೌಕರ್ಯ, ಸಿಸಿ ಟಿವಿ ಅಳವಡಿಕೆ ಬಗ್ಗೆ ಮಾಹಿತಿ ಪಡೆದುಕೊಂಡರು.

ಪ್ರತಿ ಪರೀಕ್ಷೆಗೆ ನಿರ್ದಿಷ್ಟ ಸಂಖ್ಯೆಯ ಕೆಲವು ವಿದ್ಯಾರ್ಥಿಗಳು ಗೈರಾಗುತ್ತಿದ್ದಾರೆ. ಆಯಾ ಶಾಲೆಯ ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರು ಪರೀಕ್ಷೆಗೆ ಗೈರು ಹಾಜರಾಗಿರುವ ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ, ವಾಸ್ತವಿಕ ಕಾರಣ ತಿಳಿದು ತಮಗೆ ವರದಿ ನೀಡಬೇಕೆಂದು ಕಲಘಟಗಿ ಬಿಇಓ ಅವರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.



ಕಲಘಟಗಿ ತಾಲೂಕಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಗಳ ಭೇಟಿಯಲ್ಲಿದ್ದಾಗ ಕಲಘಟಗಿ ಪಟ್ಟಣದ ಜನತಾ ಪ್ರೌಢಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯುತ್ತಿದ್ದ ಸ್ಪಂದನಾ ಬೋಸ್ಲೆ ಎಂಬ ವಿದ್ಯಾರ್ಥಿನಿ ಎದೆ ನೋವಿನಿಂದ ಅಸ್ವಸ್ಥಳಾಗಿದ್ದಳು.

ಸುದ್ದಿ ತಿಳಿದ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು, ತಕ್ಷಣ ವಿದ್ಯಾರ್ಥಿ ಆರೋಗ್ಯ ಸ್ಥಿತಿ ನೋಡಿಕೊಂಡು ಅಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕಳುಹಿಸಲು ಬಿಇಓ ಮತ್ತು ಕೇಂದ್ರದ ಮುಖ್ಯ ಪರೀಕ್ಷಕರಿಗೆ ನಿರ್ದೇಶಿಸಿದರು.


ತಕ್ಷಣ ಅಗತ್ಯ ಚಿಕಿತ್ಸೆ, ಔಷಧಿ ಸಿಕ್ಕಿದ್ದರಿಂದ ವಿದ್ಯಾರ್ಥಿನಿಯ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಜಿಲ್ಲಾಧಿಕಾರಿಗಳು ಆಸ್ಪತ್ರೆಗೆ ಸ್ವತಃ ಭೇಟಿ ನೀಡಿ, ಅಗತ್ಯವಾದ ಉತ್ತಮ ಚಿಕಿತ್ಸೆ, ಔಷಧಿ ನೀಡಿ, ಆರೈಕೆ ಮಾಡುವಂತೆ ಮುಖ್ಯ ವೈದ್ಯಾಧಿಕಾರಿ ಡಾ. ಯಶವಂತ ಮದೀನಕರ ಅವರಿಗೆ ಸೂಚಿಸಿದರು. ವಿದ್ಯಾರ್ಥಿನಿಗೆ ಪರೀಕ್ಷೆ ಬಗ್ಗೆ ವಿಚಾರಿಸಿ, ಧೈರ್ಯ ಹೇಳಿದರು. ಅವರ ಮನೆಯಲ್ಲಿ ಆರ್ಥಿಕ, ಕೌಟಂಬಿಕ ಸಮಸ್ಯೆ ಇರುವುದನ್ನು ತಿಳಿದು, ಬಯಸಿದಲ್ಲಿ ವಿದ್ಯಾರ್ಥಿನಿಗೆ ವಿದ್ಯಾರ್ಥಿನಿಲಯ ಕಲ್ಪಿಸುವುದಾಗಿ ಭರವಸೆ ನೀಡಿದರು.

ತಾಲೂಕು ಆಸ್ಪತ್ರೆಯ ಸಿಎಂಓ ಡಾ. ಯಶವಂತ ಮದೀನಕರ ಹಾಗೂ ಫಿಜಿಶಿಯನ್ ಡಾ. ನಿರ್ಮಲಾ ಪುಡಲಕಟ್ಟಿ ಅವರು ವಿದ್ಯಾರ್ಥಿನಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ ಕಲಘಟಗಿ ಪ್ರಭಾರ ತಹಸೀಲ್ದಾರ ಬಸವರಾಜ ಬೆಣ್ಣಿಶಿರೂರ, ಕ್ಷೇತ್ರ ಶಿಕ್ಷಣಾಧಿಕಾರಿ ಮಹಾದೇವಿ ಬಸಾಪುರ ಹಾಗೂ ಶಿಕ್ಷಣಾಧಿಕಾರಿ ರೇಖಾ ಭಜಂತ್ರಿ ಸೇರಿದಂತೆ ಇತರರು ಇದ್ದರು.

ಕಲಘಟಗಿ ತಾಲೂಕಿನಲ್ಲಿ ಒಟ್ಟು 9 ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರಗಳಿದ್ದು, ಶನಿವಾರದ ಸಮಾಜ ವಿಜ್ಞಾನ ಪರೀಕ್ಷೆಗೆ ಒಟ್ಟು 2,554 ವಿದ್ಯಾರ್ಥಿಗಳು ಹಾಜರಾಗಿದ್ದರು. ಇದರಲ್ಲಿ 1,206 ಗಂಡು ಮಕ್ಕಳು ಹಾಗೂ 1,303 ಹೆಣ್ಣುಮಕ್ಕಳು ಸೇರಿದ್ದು, 45 ವಿದ್ಯಾರ್ಥಿಗಳು ಗೈರುಹಾಜರಾಗಿದ್ದರು.

# ಪ್ರಧಾನಿ ನರೇಂದ್ರ ಮೋದಿಗೆ ವಿಶೇಷ ಮನವಿ ಸಲ್ಲಿಸಿದ ಸಿಎಂ ಸಿದ್ದರಾಮಯ್ಯ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**



ಯುಗಾದಿಗೂ ಮುನ್ನಾ ದಿನ ಪ್ರಧಾನಿ ನರೇಂದ್ರ ಮೋದಿಗೆ ಕರ್ನಾಟಕ ಸಿಎಂ ಸಿದ್ದರಾಮಯ್ಯ ವಿಶೇಷ ಮನವಿ ಸಲ್ಲಿಸಿದರು.

ಈ ಸಂಬಂಧ ಪ್ರಧಾನಿಗೆ ಪತ್ರ ಬರೆದಿರುವ ಸಿದ್ದರಾಮಯ್ಯ, ಪ್ರಾಚೀನ ಸ್ಮಾರಕಗಳು, ಐತಿಹಾಸಿಕ ತಾಣಗಳು ಮತ್ತು ಅವಶೇಷಗಳ ಕಾಯ್ದೆ 1958ರ ಅಡಿ ವೀರ ರಾಣಿ ಕಿತ್ತೂರು ಚೆನ್ನಮ್ಮನವರ ಸಮಾಧಿಯನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸುವಂತೆ ಮನವಿ ಮಾಡಿದ್ದಾರೆ.

ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಸಶಸ್ತ್ರ ಹೋರಾಟವನ್ನು ಮುನ್ನಡೆಸಿದ ಮಹಿಳೆಯರಲ್ಲಿ ರಾಣಿ ಚೆನ್ನಮ್ಮ ಮೊದಲಿಗರು. ಅವರ ಶೌರ್ಯ ಮತ್ತು ಅದಮ್ಯ ಚೈತನ್ಯ ಯುವಜನತೆಗೆ ಸ್ಫೂರ್ತಿದಾಯಕವಾಗಿದೆ ಎಂದು ವಿವರಿಸಿದ್ದಾರೆ. ಅಪ್ರತಿಮ ನಾಯಕಿಯ ಸಮಾಧಿಯು ಕೇವಲ ವಿಶ್ರಾಂತಿ ಸ್ಥಳವಲ್ಲ, ಬದಲಾಗಿ ಭಾರತದ ಸ್ವಾತಂತ್ರ್ಯ ಹೋರಾಟವನ್ನು ಪ್ರತಿನಿಧಿಸುವ ಮಹಾನ್ ಶಕ್ತಿ ಸ್ಥಳವಾಗಿದೆ. 1824ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ರಾಣಿ ಚೆನ್ನಮ್ಮ ಕೆಚ್ಚೆದೆಯಿಂದ ಹೋರಾಡಿದ ಕಾರಣ ಇಂದಿಗೂ ಈ ಸಮಾಧಿ ತಾಣ ಧೈರ್ಯ ಮತ್ತು ತ್ಯಾಗದ ಸಂಕೇತವಾಗಿ ನಿಂತಿದೆ ಎಂದಿದ್ದಾರೆ.

ಹೀಗಾಗಿ, ವೀರ ರಾಣಿ ಕಿತ್ತೂರು ಚೆನ್ನಮ್ಮನವರ ಸಮಾಧಿಯನ್ನು ಪ್ರಾಚೀನ ಸ್ಮಾರಕಗಳು, ಐತಿಹಾಸಿಕ ತಾಣಗಳು ಮತ್ತು ಅವಶೇಷಗಳ ಕಾಯ್ದೆ 1958ರ ಅಡಿಯಲ್ಲಿ ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಲು ಮನವಿ ಮಾಡುತ್ತೇನೆ. ಈ ಮೂಲಕ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿನ ಅವರ ಹೋರಾಟವನ್ನು ಸ್ಮರಿಸಿ, ರಾಷ್ಟ್ರಕ್ಕೆ ಅವರು ನೀಡಿದ ಕೊಡುಗೆಯನ್ನು ಗೌರವಿಸುವಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

## ಸಾರಿಗೆ ಬಸ್-ಬೈಕ್ ಮುಖಾಮುಖಿ-ದಂಪತಿ ಸಾವು!

**■ವಿಜಯಸಾಕ್ಷಿ ಸುದ್ದಿ, ಬಾಗಲಕೋಟೆ**

ಕೆಎಸ್ ಆರ್ ಟಿಸಿ ಬಸ್ ಹಾಗೂ ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಮಳಲಿ ಗ್ರಾಮದ ಸಮೀಪ ಜರುಗಿದೆ.

ಮುಗಳಖೋಡ ಗ್ರಾಮದ ನಿವಾಸಿಗಳಾದ ಶಂಕರ ( 50), ಶ್ರೀದೇವಿ(40) ಮೃತ ದಂಪತಿ. ಇವರು ಮುಗಳಖೋಡದಿಂದ ಮಳಲಿ ಕಡೆಗೆ ಹೊರಟಿದ್ದ ವೇಳೆ ಅವಘಡ ಸಂಭವಿಸಿದೆ. ಬಸ್ ನಲ್ಲಿದ್ದ ಹಲವರಿಗೆ ಸಣ್ಣಪುಟ್ಟ ಗಾಯವಾಗಿದೆ. ಬಸ್ ಡಿಕ್ಕಿ ಹೊಡೆದ ರಭಸಕ್ಕೆ ಸ್ವಾಗತ ಕಮಾನ್ ನೆಲಕ್ಕುರುಳಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಡಿಪೋಗೆ ಈ ಬಸ್ ಸೇರಿದ್ದು, ಸ್ಥಳಕ್ಕೆ ಮುಧೋಳ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.



# ಕೃಷಿ ಜಮೀನುಗಳ ಸೀಮೆಗೆ ಹಾಲೆರೆದ ಭಕ್ತರು



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸಮೀಪದ ಜಕ್ಕಲಿ ಗ್ರಾಮದ ಗ್ರಾಮದೇವತೆಗಳಾದ ದ್ಯಾಮಮ್ಮದೇವಿ, ದುರ್ಗಮ್ಮದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಮೂರನೇ ದಿನದ ಕಾರ್ಯಕ್ರಮದಲ್ಲಿ ಗ್ರಾಮದ ಸುತ್ತಮುತ್ತಲಿನ ಕೃಷಿ ಜಮೀನುಗಳ ಸೀಮೆಗಳಲ್ಲಿ ಡೊಳ್ಳು ವಾದ್ಯವೈಭವದೊಂದಿಗೆ ಹಾಲನ್ನು ಎರೆಯಲಾಯಿತು. ಮೊದಲು ಮಾರನಬಸರಿ ದಾರಿಯಲ್ಲಿರುವ ದೇವತೆ ಮರದ ಸ್ಥಳದಲ್ಲಿ ಭೂತಾಯಿಗೆ ವಿಶೇಷ ಪೂಜೆ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯುವ ಗ್ರಾಮದೇವತೆಗಳ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಈ ಆಚರಣೆಯು ಹಿಂದಿನ ಸಂಪ್ರದಾಯದಂತೆ ನಡೆಯುತ್ತಾ ಬಂದಿದ್ದು, ನಮಗೆ ಉತ್ತಮವಾದ ಮಳೆ ಸುರಿಸಿ, ಮುಂಗಾರಿ ಮತ್ತು ಹಿಂಗಾರಿ ಬೆಳೆಗಳು ಸಮೃದ್ಧವಾಗಿ ಬೆಳೆದು ರೈತರ ಬಾಳನ್ನು ಹಸನಾಗಿಸು ಎಂದು ದೇವತೆಗಳಿಗೆ ಹಾಗೂ ಭೂತಾಯಿ ಮಡಿಲಿಗೆ ನಮಸ್ಕರಿಸಿ ಈ ಹಾಲನ್ನು ಎರೆಯಲಾಗುತ್ತದೆ ಎಂದು ಯುವ ರೈತರಾದ ಉಮೇಶ ಮೇಟಿ ಹೇಳಿದರು.

ಈ ವೇಳೆಯಲ್ಲಿ ಹಿರಿಯ ರೈತರಾದ ಎಮ್.ಎಮ್. ಮೇಟಿ, ಶೇಖರಪ್ಪ ಆದಿ, ಚೆನ್ನಬಸವ ಅರಹುಣಸಿ, ಅಂದಾನಗೌಡ ಪಾಟೀಲ, ಮುತ್ತಣ್ಣ ಅಸೂಟಿ, ಮುತ್ತಣ್ಣ ಪಾಟೀಲ, ಸಂತೋಷ ಮೇಟಿ, ಮಲ್ಲಿಕಾರ್ಜುನ ಮುಧೋಳ, ರಾಜಣ್ಣ ಮೇಟಿ, ಬಸವರಾಜ ಕುರಗೋಡಿ, ರಾಜೇಸಾಬ ಜಿಡ್ಡಿಮನಿ, ಬಸವರಾಜ ತೆಗ್ಗಿನಮನಿ, ಮಂಜುನಾಥ ಮುಗಳಿ, ಅಂದಪ್ಪ ರೋಣದ, ವಿಶ್ವ ಮುಕ್ಕಣ್ಣವರ, ಬಸವರಾಜ ಕಮ್ಮಾರ, ಮುತ್ತು ಗುಬ್ಬೇನಕೊಪ್ಪ ರುದ್ರಪ್ಪ ಜಂಗಣ್ಣವರ, ಕಿರಣ್ ಆರೇರ, ಶಿವು ಗುಬ್ಬೇನಕೊಪ್ಪ ಮುಂತಾದ ರೈತರು ಪಾಲ್ಗೊಂಡಿದ್ದರು.

# ನಮ್ಮ ದೇವರನ್ನು ನಂಬದೇ ಇರುವವರ ಜೊತೆ ನಾವು ವ್ಯಾಪಾರ ಮಾಡಬಾರದು

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ನಮ್ಮ ದೇವರನ್ನು ನಂಬದೇ ಇರುವವರ ಜೊತೆ ನಾವು ವ್ಯಾಪಾರ ಮಾಡಬಾರದು ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಹೇಳಿದ್ದಾರೆ.

ಧಾರವಾಡದಲ್ಲಿ ಮಾತನಾಡಿದ ಅವರು, ಹಿಂದುಗಳು ಶುದ್ಧ ಮತ್ತು ಪವಿತ್ರವಾಗಿರುವ ವಸ್ತುಗಳನ್ನು ಖರೀದಿ ಮಾಡಿ ದೇವರಿಗೆ ಸಮರ್ಪಿಸಬೇಕು. ಗೋ ಹಂತಕರ, ಭಕ್ಷಕರ ಜೊತೆ ವ್ಯಾಪಾರ ಮಾಡಿ ಯುಗಾದಿಯನ್ನು ಹಲಾಲ್ ಮಾಡಬಾರದು.



ಮುಸ್ಲಿಂ ವ್ಯಾಪಾರಿಗಳು ವಸ್ತುಗಳ ಮೇಲೆ ಉಗುಳಿ ಹೇಸಿಗೆ ಮಾಡುತ್ತಾರೆ. ಅಂತವರ ಬಳಿ ನಾವು ಯಾಕೆ ವ್ಯಾಪಾರ ಮಾಡಬೇಕು? ಅಂತದನ್ನು ತೆಗೆದುಕೊಂಡು ನೈವೇದ್ಯ ಮಾಡಿ, ಪೂಜೆ ಮಾಡುವುದು ಸರಿಯಲ್ಲ. ಇದು ಶಾಸ್ತ್ರದ ವಿರುದ್ಧವಾದದ್ದು. ನಮ್ಮ ದೇವರನ್ನು ನಂಬದೇ ಇರುವವರ ಜೊತೆ ನಾವು ವ್ಯಾಪಾರ ಮಾಡಬಾರದು ಎಂದರು.

ಬಸನಗೌಡ ಪಾಟೀಲ್ ಯತ್ನಾಳ್ ಅವರ ಉಚ್ಚಾಟನೆಯ ಕುರಿತು ಪ್ರತಿಕ್ರಿಯಿಸಿ, ಉಚ್ಚಾಟನೆ ಪ್ರಕ್ರಿಯೆಯನ್ನು ಬಿಜೆಪಿ ವರಿಷ್ಠರು ಮರು ಪರಿಶೀಲಿಸಬೇಕು. ಇದು ಪಕ್ಷದ ಆಂತರಿಕ ವಿಚಾರ. ಇಡೀ ದೇಶದಲ್ಲಿ ಇರುವ ಬಿಜೆಪಿಯು ಹಿಂದುತ್ವದ ಪಕ್ಷ. ಆದರೆ, ಸದ್ಯ ಪಕ್ಷದಲ್ಲಿ ಆಗುತ್ತಿರುವ ಬೆಳವಣಿಗೆ ದುರದೃಷ್ಟಕರ ಎಂದರು.

## ಕಾಂಗ್ರೆಸ್ ಪಕ್ಷಕ್ಕೆ ಯತ್ನಾಳ್ ಕರೆತರುವಷ್ಟು ನಾನು ಸಾಮರ್ಥ್ಯ ಹೊಂದಿಲ್ಲ

**■ವಿಜಯಸಾಕ್ಷಿ ಸುದ್ದಿ, ಕಲಬುರಗಿ**

ಕಾಂಗ್ರೆಸ್ ಪಕ್ಷಕ್ಕೆ ಯತ್ನಾಳ್ ಕರೆತರುವಷ್ಟು ನಾನು ಸಾಮರ್ಥ್ಯ ಹೊಂದಿಲ್ಲ ಎಂದು ಸಚಿವ ಶರಣಪ್ರಕಾಶ್ ಪಾಟೀಲ್ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಭ್ರಷ್ಟಾಚಾರ ಮತ್ತು ಕುಟುಂಬ ರಾಜ-ಕಾರಣದ ವಿರುದ್ಧ ಹೋರಾಟ ಮಾಡಿದ್ದಾರೆ. ಅವರನ್ನು ಉಚ್ಚಾಟನೆ ಮಾಡಿರುವುದು ದುರಾದೃಷ್ಟಕರ.

ರಾಜಕಾರಣದಲ್ಲಿ ಉಚ್ಚಾಟನೆ ಯಂತಹ ಘಟನೆಗಳು ನಡೆಯಬಾರದು. ಕಾಂಗ್ರೆಸ್ ಪಕ್ಷಕ್ಕೆ ಯತ್ನಾಳ್ ಅವರನ್ನು ಕರೆತರಲು ತಾವು ಸಾಮರ್ಥ್ಯ ಹೊಂದಿಲ್ಲ. ಅದಕ್ಕಾಗಿ ಬೇರೆ ವ್ಯಕ್ತಿಗಳು ಇದ್ದಾರೆ ಎಂದರು.

### 'ಹಳಗನ್ನಡ ಓದು: ಪಠ್ಯಾಧಾರಿತ' ಒಂದು ದಿನದ ರಾಷ್ಟ್ರಮಟ್ಟದ ಕಾರ್ಯಾಗಾರ

# ಪ್ರೊ. ಕಲಬುರ್ಗಿ ಕನ್ನಡದ ಉಳಿವಿಗಾಗಿ ಶ್ರಮಿಸಿದವರು

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ಡಾ. ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ ಧಾರವಾಡ ಹಾಗೂ ಧಾರವಾಡದ ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ 'ಹಳಗನ್ನಡ ಓದು: ಪಠ್ಯಾಧಾರಿತ' ಒಂದು ದಿನದ ರಾಷ್ಟ್ರಮಟ್ಟದ ಕಾರ್ಯಾಗಾರವು ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜರುಗಿತು.

ಕಾರ್ಯಾಗಾರದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಡಾ. ಶಾಂತಿನಾಥ ದಿಬ್ಬದ ಮಾತನಾಡಿ, ಪ್ರೊ. ಕಲಬುರ್ಗಿಯವರು ತಾವು ಇದ್ದಾಗಲೂ ಕನ್ನಡದ ಉಳಿವಿಗಾಗಿ, ಬೆಳವಣಿಗೆಗಾಗಿ ಕಾರ್ಯಮಾಡಿದ್ದರು. ಈಗ ಅವರು ಇಲ್ಲದೆ ಇದ್ದರೂ ಪ್ರತಿಷ್ಠಾನದ ಮೂಲಕ ಅವರ ವಿಚಾರಗಳನ್ನು, ಯೋಜನೆಗಳನ್ನು ನಾಡಿನ ಜನಕ್ಕೆ, ವಿದ್ಯಾರ್ಥಿಗಳಿಗೆ, ವಿದ್ವತ್ ಲೋಕಕ್ಕೆ ಹಂಚುತ್ತಿರುವುದು ಖುಷಿಯ ಸಂಗತಿಯಾಗಿದೆ ಎಂದರು.



ಪ್ರತಿಷ್ಠಾನದ ಸದಸ್ಯೆ ಹಾಗೂ ಶಾಸನತಜ್ಞೆ ಹನುಮಾಕ್ಷಿ ಗೋಗಿ ಮಾತನಾಡಿ, ಇಡೀ ಕನ್ನಡ ಭಾಷೆಗೆ ಒಂದು ಪ್ರಾಚೀನತೆಯನ್ನು ತಂದುಕೊಟ್ಟಿದ್ದು, ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ತಂದುಕೊಟ್ಟದ್ದು ಶಾಸನಗಳು. ಶಾಸನದ ನಂತರ ಹಳಗನ್ನಡದ ಕೃತಿಗಳು. ಕನ್ನಡ ಭಾಷೆ ಯಾವಾಗಿನಿಂದ ಇತ್ತು ಎಂಬುದನ್ನು ಬನವಾಸಿಯ ಹಲ್ಮಿಡಿಯ ಶಾಸನ ತಿಳಿಸಿಕೊಡುತ್ತದೆ ಎಂದರು.

ಶಶಿಧರ ತೋಡಕರ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಒಂದು ವಿಶ್ವವಿದ್ಯಾಲಯದಲ್ಲಿ ವಿಭಾಗದ ಮುಖ್ಯಸ್ಥನಾಗಿ ಕೆಲಸ ಮಾಡುವ ಪ್ರಾಧ್ಯಾಪಕರಾದ ಕಲಬುರ್ಗಿಯವರನ್ನು ಪಂಪ ಪ್ರಶಸ್ತಿ ಅರಸಿಬರುತ್ತದೆಯೆಂದರೆ, ಆ ವಿಶ್ವವಿದ್ಯಾಲಯದ, ವಿಭಾಗದ ಘನತೆಯನ್ನು ಹೆಚ್ಚಿಸಿದವರು ಕಲಬುರ್ಗಿ ಅವರಾಗಿದ್ದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಸಂದರ್ಭದಲ್ಲಿ ಹೊಲದ ತುಂಬಾ ಹೊಸ ಬೆಳೆ ಎಂಬ ಯೋಜನೆಯಲ್ಲಿ ಪ್ರತಿಯೊಬ್ಬ ಪ್ರಾಧ್ಯಾಪಕರಿಗೆ ಕೆಲಸವನ್ನು ನೀಡಿ ಆ ವಿಶ್ವವಿದ್ಯಾಲಯದ ಆರ್ಥಿಕ ಘನತೆಯನ್ನು ಹೆಚ್ಚಿಸಿದವರು ಕಲಬುರ್ಗಿಯವರು ಎಂದರು.

ಅಧ್ಯಕ್ಷತೆಯನ್ನು ವಹಿಸಿದ ಸ.ಪ್ರ.ದ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ಎಸ್.ಎಸ್. ಅಂಗಡಿ ವಹಿಸಿದ್ದರು. ಪ್ರತಿಷ್ಠಾನದ ಸದಸ್ಯ ಕಾರ್ಯದರ್ಶಿ ಕುಮಾರ ಬೆಕ್ಕೇರಿ ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಎಸ್. ಭಗವತಿ ಅತಿಥಿಗಳನ್ನು ಪರಿಚಯಿಸಿದರು. ಐ.ಕ್ಯೂ.ಐ.ಸಿ. ಸಂಚಾಲಕರಾದ ವ್ಯಾಪಾರಿ ಮಧೂಸೂಧನ ಕೆ, ಪ್ರತಿಷ್ಠಾನದ ಸದಸ್ಯರಾದ ಡಾ. ಬಾಳಣ್ಣ ಶೀಗೀಹಳ್ಳಿ ಉಪಸ್ಥಿತರಿದ್ದರು. ಡಾ. ಗಾಯಿತ್ರಿ ಕುಲಕರ್ಣಿ ನಿರೂಪಿಸಿದರು, ಅನಿಲಕುಮಾರ ಖಾತೆದಾರ ವಂದಿಸಿದರು. ಕಾರ್ಯಾಗಾರದಲ್ಲಿ ಹಿರಿಯರಾದ ಹೂಗಾರ, ಆರ್.ಬಿ. ಚಿಲುಮಿ, ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಮಹಾವಿದ್ಯಾಲಯದ ಕನ್ನಡ ವಿಭಾಗದ ಉಪನ್ಯಾಸಕರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.


## ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ, ಗದಗ

ಪಿನ್ ಕೋಡ್ ನಂ. 582101. ದೂರವಾಣಿ: 08372-278003.
ಇ ಮೇಲ್: uda_gadag@hotmail.com

ಸಂ: ನಅಪ್ರಾಗಬೆ/ಭೂಬ/2024-25/1871 ದಿನಾಂಕ:29.03.2025

**ಪ್ರಕಟಣೆ**

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವದೇನೆಂದರೆ, ಅರ್ಜಿದಾರರಾದ **ಶ್ರೀ ನಜೀರಹ್ಮದ ಬುಡನಸಾಬ ನಾಯ್ಕರ** ಹಾಗೂ **ಶ್ರೀ ಅನ್ವರ್ ಬುಡನಸಾಬ ನಾಯ್ಕರ ಸಾ॥ ಗದಗ** ಈ ಕೆಳಕಂಡ ಜಮೀನನ್ನು ಭೂಉಪಯೋಗ ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಈ ಭೂಉಪಯೋಗ ಬದಲಾವಣೆಯಿಂದ ಸ್ಥಳದಲ್ಲಿ ವಸತಿ ನಿವೇಶನಗಳನ್ನು ಮಾಡಲು ಉದ್ದೇಶಿಸಿರುತ್ತಾರೆ. ಇದರಿಂದ ಅರ್ಜಿದಾರರಿಗೆ ಹಾಗೂ ಸಾರ್ವಜನಿಕರಿಗೆ ವಸತಿ ನಿವೇಶನಗಳು ಸಿಗುತ್ತವೆ. ಇದರಿಂದ ನಗರದಲ್ಲಿ ವಸತಿ ಸಮಸ್ಯೆ ಸ್ವಲ್ಪ ಬಗೆಹರಿಯುತ್ತದೆ ಎಂದು ತಮ್ಮ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ **1961 ರ ಕಲಂ 14(ಎ)**ರಂತೆ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಯುಕ್ತರು, ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ, ಪಿ.ಬಿ. ರೋಡ ಗದಗ-582101. ಇವರಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಅ.ನ | ಗ್ರಾಮ | ರಿ.ಸ.ನಂ | ಕ್ಷೇತ್ರ | ಮಹಾ ಯೋಜನೆ ಪ್ರಕಾರ ನಿಗಧಿಪಡಿಸಿದ ಭೂ ಉಪಯೋಗ | ಅರ್ಜಿದಾರರು ಬಯಸಿರುವ ಭೂ ಉಪಯೋಗ ಬದಲಾವಣೆ |
|---|---|---|---|---|---|
| 1 | ಬೆಟಗೇರಿ | 286/*/5 | 02ಎಕರೆ-03ಗುಂಟೆ | ಕೃಷಿ | ವಸತಿ |
| 2 | ಬೆಟಗೇರಿ | 286/*/6 | 02ಎಕರೆ-03ಗುಂಟೆ | | |
| | ಒಟ್ಟು ಕ್ಷೇತ್ರ | | 04ಎಕರೆ-06ಗುಂಟೆ | | |

ಸಹಿ/- ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಗದಗ-ಬೆಟಗೇರಿ

ವಾ.ಸಾ.ಇ/ಗದಗ/733/ದೇಶಪಾಂಡೆಪಬ್ಲಿಸಿಟಿ/2024-25


# ಏಪ್ರಿಲ್ 20ಕ್ಕೆ ಸಾಹಿತ್ಯ-ಸಾಂಸ್ಕೃತಿಕ ಮೇಳ

**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಕೊಪ್ಪಳದ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ಹಾಗೂ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ ಎಪ್ರಿಲ್ 20ರಂದು ಅಖಿಲ ಕರ್ನಾಟಕ 12ನೇ ಕವಿ ಸಮ್ಮೇಳನ, ಸಾಂಸ್ಕೃತಿಕ ಪ್ರತಿಭೋತ್ಸವ, ವಿವಿಧ ಕ್ಷೇತ್ರದ ಸಾಧಕರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ರಾಜ್ಯ ಮಟ್ಟದ ಪ್ರಶಸ್ತಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆಯಲಿದೆ.

ಬಿಗ್ ಬಾಸ್ ಸ್ಪರ್ಧಿ ಗೋಲ್ಡ್ ಸುರೇಶ್ ಅವರು ಸರ್ವಾಧ್ಯಕ್ಷತೆ ವಹಿಸಲಿದ್ದಾರೆ. ಕಲೆ, ಸಾಹಿತ್ಯ, ಸಾಮಾಜಿಕ, ಪತ್ರಿಕೋದ್ಯಮ, ವೈದ್ಯಕೀಯ, ಕ್ರೀಡೆ ಹಾಗೂ ಇತರೆ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಾಧಕ ಪ್ರತಿಭೆಗಳಿಗೆ ಅವಕಾಶವಿದ್ದು, ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ಹಾಸ್ಯ, ವಿಚಾರ ಸಂಕಿರಣಗಳು ನಡೆಯಲಿವೆ. ಭಾಗವಹಿಸುವ ಆಸಕ್ತರು ತಮ್ಮ ಕಿರು ಪರಿಚಯ ಮತ್ತು ಫೋಟೋಗಳೊಂದಿಗೆ ಹೆಸರು ನೋಂದಾಯಿಸಬಹುದಾಗಿದ್ದು, ವಯಸ್ಸಿನ ಮಿತಿ ಇರುವುದಿಲ್ಲ.

ಹೆಸರು ನೋಂದಾಯಿಸಲು ಕೊನೆಯ ದಿನಾಂಕ ಎಪ್ರಿಲ್ 8 ಆಗಿದ್ದು, ಮಾಹಿತಿಯನ್ನು ಅಧ್ಯಕ್ಷರು, ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ಕುಕನೂರು-583232, ಕೊಪ್ಪಳ ಜಿಲ್ಲೆ, ಮೊ: 7815985505 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka